ವಿಜಯಪುರ | ಸಂಪುಟ 02 | ಸಂಚಿಕೆ 91 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ಮೇ 29, 2024



"ವಿಧಾನ ಪರಿಷತ್ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಡಿಸಿಎಂ ಡಿಕೆ ಶಿವಕುಮಾರ್ ನಮ್ಮಂತಹ ಪಕ್ಷದ ಹಿರಿಯ ನಾಯಕರ ಸಲಹೆಯನ್ನು ಪಡೆದರೆ ಅದು ಸೂಕ್ತವಾಗಿರಲಿದೆ. ಯಾರ ಸಲಹೆಯನ್ನೂ ಪಡೆಯದೇ ಅವರೇ ನಿರ್ಧಾರ ತೆಗೆದುಕೊಂಡರೆ, ನನ್ನ ಪ್ರಕಾರ ಅದು ಸರಿಯಲ್ಲ."

ಉದಯರಶ್ಮಿ ದಿನಪತ್ರಿಕೆ

– ಡಾ.ಜಿ ಪರಮೇಶ್ವರ್
ರಾಜ್ಯ ಗೃಹ ಸಚಿವರು

### ಮುಂಬರುವ ಚುನಾವಣೆಗಳಿಗೆ ಡಿಕೆಶಿ ನೇತೃತ್ವ । ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಜಿ ಸಿ ಚಂದ್ರಶೇಖರ್ ಸ್ಪಷ್ಟನೆ

# ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಯಾವುದೇ ಬದಲಾವಣೆಯಿಲ್ಲ

ಬೆಂಗಳೂರು: ಮುಂಬರುವ ಚುನಾವಣೆಗಳನ್ನುನ್ನು ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ನೇತೃತ್ವದಲ್ಲಿಯೇ ಎದುರಿಸಲಿದ್ದು, ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಜಿ ಸಿ ಚಂದ್ರಶೇಖರ್ ಸೋಮವಾರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಯಾವುದೇ ಬದಲಾವಣೆಗಿದು ಕಾಲವಲ್ಲ. ಮುಂಬರುವ ಬಿಬಿಎಂಪಿ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಡಿಕೆ.ಶಿವಕುಮಾರ್ ಅವರ ನೇತೃತ್ವದಲ್ಲಿಯೇ ಪಕ್ಷ ಎದುರಿಸಲಿದೆ. ಚುನಾವಣೆ ಕು-ರಿತು ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ ಕೆ ಶಿವಕುಮಾರ್ ಅವರೊಂದಿಗೆ ಚರ್ಚಿಸಲಿದೆ. ಶಿವಕುಮಾರ್ ನೇತೃತ್ವದಲ್ಲಿಯೇ ಚುನಾವಣೆ ನಡೆಯಲಿದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕಾಗಿ ಸಚಿವ ಸ್ಥಾನ ತೊರೆಯಲು ಸಿದ್ಧ ಎಂಬ ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ ಎಂದು ತಿರುಗೇಟು ನೀಡಿದರು.



ಕೆಪಿಸಿಸಿ ಅಧ್ಯಕ್ಷರಾಗುವ ಬಯಕೆ ಹಲವರಿಗಿದೆ. ಆದರೆ, ಈ ವಿಚಾರವನ್ನು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಬೇಕೇ ವಿನಃ ಸಾರ್ವಜನಿಕವಾಗಿ ಮಾತನಾಡಿ ಪಕ್ಷಕ್ಕೆ ಮುಜುಗರ ಉಂಟು ಮಾಡಬಾರದು ಎಂದು ಸಲಹೆ ನೀಡಿದರು.

ಇದೇ ವೇಳೆ ಬೆಂಗಳೂರು ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋ-ಜಿಗೌಡ ಅವರು ಮಹಾರಾಷ್ಟ್ರದವರೇ ಆಗಿರುವುದರಿಂದ ಅವರು ಒಕ್ಕಲಿಗನಲ್ಲ ಎಂಬ ಬಿಜೆಪಿಯ ಮಾಜಿ ಸಚಿವ ಮುನಿರತ್ನ ಹೇಳಿಕೆ ವಿರುದ್ಧ ವಾಗ್ದಾಳಿ ನಡೆಸಿದರು.

ಜಾತಿ ವಿಷಯ ಪ್ರಸ್ತಾಪಿಸಿದ ಮುನಿರತ್ನ ವಿರುದ್ಧ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಲಿದೆ ಎಂದು ಹೇಳಿದರು.

ಬಳಿಕ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ರಾಮೋ-ಜಿಗೌಡ ಅವರಿಗೆ ಮೊದಲ ಸ್ಥಾನ ಸಿಗುವ ವಿಶ್ವಾಸವಿದೆ. ಹೀಗಾಗಿ ವಿರೋಧ ಪಕ್ಷದವರು ಇದನ್ನು ಅರಗಿಸಿಕೊಳ್ಳಲಾಗದೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.


ಇದೇ ವೇಳೆ ನೌಕರರಿಗೆ ಅನುಕೂಲವಾಗುವಂತೆ 7ನೇ ವೇತನ ಆಯೋಗದ ಶಿಫಾರಸುಗಳನ್ನು ಸರ್ಕಾರ ಜಾರಿಗೆ ತರಲಿದೆ ಎಂದು ತಿಳಿಸಿದರು.

7ನೇ ವೇತನ ಆಯೋಗದ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದ್ದು, ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡಸಿ, ಚುನಾವಣಾ ಫಲಿತಾಂಶದ ನಂತರ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಲಿದೆ ಎಂದು ಪರಿಷತ್ ಮಾಜಿ ಅಧ್ಯಕ್ಷ ವಿ.ಆರ್.ಸುದರ್ಶನ್ ಹೇಳಿದರು

## ರಾಜ ನುಡಿ

ಕಿವಿ ತುಂಬಿದಾಗ (ಚುಚೊದು) ನಾಲಿಗೆ ಬೊಗಳುತ್ತೆ. ಮಸ್ತಕ ತುಂಬಿದಾಗ (ಜ್ಞಾನ) ನಾಲಿಗೆ ಮೌನವಾಗಿರುತ್ತೆ. ಹೃದಯ ತುಂಬಿದಾಗ (ಮಮತೆ) ನಾಲಿಗೆ ಹಾಡುತ್ತೆ. ಹಾಗಾದ್ರೆ ಯಾರ ನಾಲಿಗೆ ಏನು ಅಂತ ಇನ್ನೇಲೆ ಗಮನಿಸೋಣ ಅಲ್ವಾ..!

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 388

*ಅಂತರಂಗದಲ್ಲಿ ಆಡುವ ಪಕ್ಷಿಯ*
*ಅಂತುವನಾರು ಬಲ್ಲರು ಹೇಳ?*
*ಅಂತರ ಮಹದಂತರವನೊಡಗೂಡಿ*

*ಸ್ವತಂತ್ರನಾಗಿ ನಿಂದ ನಿಲವನು ನಿಜಗುರು*
*ಸ್ವತಂತ್ರಸಿದ್ಧಲಿಂಗೇಶ್ವರಾ,ನಿಮ್ಮ ಶರಣರಾದ*
*ಮಹಾಂತರೇ ಬಲ್ಲರು.*

ಇತರ ಪ್ರಾಣಿಗಳಿಗಿಂತ ಮನುಷ್ಯನು ಭಿನ್ನವಾಗಿರುವುದು ಅವನು ಹೊಂದಿರುವ "ಮನಸ್ಸಿನ" ಕಾರಣದಿಂದ, ಈ ಮನಸ್ಸು ಎನ್ನುವು ದು ಭೌತಿಕವಾಗಿ ಗೋಚ-ರಿಸದಿದ್ದರೂ ಬೌತಿಕದ ಅಂಗವನ್ನು ನಿಯಂತ್ರಿಸುವ ಕಾರ್ಯವನ್ನು ಅದು ಮಾಡುತ್ತದೆ.ಆ ಕಾರಣಕ್ಕಾಗಿ ಮನಸ್ಸನ್ನು ಅಂಗ ರಹಿತವಾಗಿ ಗುರುತಿಸುವುದು ಅಸಾಧ್ಯ. ಅಂಗ ಮತ್ತು ಮನಸ್ಸಿನ ಸಂಬಂಧವನ್ನು ಇಲ್ಲಿ ಸ್ವತಂತ್ರಸಿದ್ಧಲಿಂಗೇಶ್ವರರು ವಚನಿಕರಿಸಿದ್ದಾರೆ. ಅಂಗದೊಳಗೆ ಸುಳಿದಾಡುವ ಮನಸ್ಸನ್ನು ಪಕ್ಷಿ ಎಂದು ಕರೆದಿದ್ದಾರೆ. ಅದರ ಅಂತುವನು ಅಂದರೆ ಇತಿಮಿತಿಯನ್ನು ಯಾರು ಬಲ್ಲರು? (ಅಂತರಂಗದಲ್ಲಿ ಆಡುವ ಪಕ್ಷಿಯ ಅಂತುವ ನಾರು ಬಲ್ಲರು ಹೇಳ?) ಎಂದು ತಮ್ಮ ಮನಸ್ಸನ್ನೆ ಪ್ರಶ್ನಿಸುವ ಮೂಲಕ ಮನಸ್ಸು ಅನಂತ, ಅಪರಿಮಿತ, ಅಪ್ರಮಾಣ ಯೋಚ ನಾ ಶಕ್ತಿಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ. ಅತ್ಯಂತ ವೇಗವಾಗಿ ಮತ್ತು ನಿಗೂಢವಾಗಿ ಚಲಿಸುವ ಮನಸ್ಸು ಮಹಾಂತ ನನ್ನು ಅಂದರೆ ಮಹಾಲಿಂಗವನ್ನು ಅಂಗಕ್ಕೆ ಪರಿಚಯಿಸುವ ಅಥವಾ ಸಂಧಿಸುವ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತದೆ. ಮನಸ್ಸನ್ನು ಈ ಕಾರ್ಯಕ್ಕೆ ಬಳಸಿಕೊಳ್ಳುವವರನ್ನು ಇಲ್ಲಿ ಸ್ವತಂತ್ರ ಸಿದ್ದಲಿಂಗೇಶ್ವರರು ಮಹಾಂತರು ಎಂದು ಕರೆದಿದ್ದಾರೆ. (ಅಂತರ ಮಹದಂತರವನೊಡಗೂಡಿ ಸ್ವತಂತ್ರನಾಗಿ ನಿಂದ ನಿಲವನು ನಿಜ ಗುರು ಸ್ವತಂತ್ರಸಿದ್ಧಲಿಂಗೇಶ್ವರಾ,ನಿಮ್ಮ ಶರಣರಾದ ಮಹಾಂತರೇ ಬಲ್ಲರು.) ಅಂಗವನ್ನು ಲಿಂಗದೊಡನೆ ಬೆಸೆಯುವ ಮನಸ್ಸನ್ನು ಬಸವಾದಿ ಶರಣರು "ಅರಿವು" ಎಂದು ಕರೆದಿರುವರು. ಇಂತಹ ಅರಿವನ್ನು ಬಸವಣ್ಣನವರು"ಅರಿಯಲಿಲ್ಲದ ಅರಿವು ಅವಗ್ರಹಿ ಸಿತ್ತಾಗಿ,ಅರಿಯುಲಿಲ್ಲದ ಮರೆಯಲಿಲ್ಲದ ನಿಜವು ನಿಂದಿತ್ತಾಗಿ, ನಿ ನಾ ರ್ ವ ು ವಾ ಯಿ ು ತ್ತು, ನಿಃಪತಿಯಾಯಿತ್ತು,ಅಗಮ್ಯದಲ್ಲಿ ಗಮನ ಕೆಟ್ಟಿತ್ತು, ನಿಂದಲ್ಲಿ ನಿರಾಳವಾಯಿತ್ತು,ಕೂಡಲಸಂಗಮದೇವರಲ್ಲಿ ಶಬ್ದಮುಗ್ಧವಾಯಿತ್ತು."ಎಂದಿರುವರು. ನಮ್ಮರಿವು ಜಾಗೃತವಾಗಲಿ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ದೇವರಹಿಪ್ಪರಗಿ ಕೃಷಿ ಕೇಂದ್ರ, ರಸಗೊಬ್ಬರ ಹಾಗೂ ಕೀಟನಾಶಕ ಮಾರಾಟ ಮಳಿಗೆಗಳಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ವಿಲಿಯಂ ರಾಜಶೇಖರ ಭೇಟಿ

# ರಸಗೊಬ್ಬರದ ಕೃತಕ ಅಭಾವ ಸೃಷ್ಟಿಸಿದರೆ ಕಠಿಣ ಕ್ರಮದ ಎಚ್ಚರಿಕೆ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಪಟ್ಟಣದ ಕೃಷಿ ಕೇಂದ್ರ ಸೇರಿದಂತೆ ವಿವಿಧ ರಸಗೊಬ್ಬರ ಹಾಗೂ ಕೀಟನಾಶಕ ಮಾರಾಟ ಮಳಿಗೆಗಳಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ವಿಲಿಯಂ ರಾಜಶೇಖರ ಹಾಗೂ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಪಟ್ಟಣದ ರೈತ ಸಂಪರ್ಕ ಕೇಂದ್ರಕ್ಕೆ ಮಂಗಳವಾರ ಆಗಮಿಸಿದ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ತಂಡ ಮುಂಗಾರು ಬಿತ್ತನೆಗೆ ಅಗತ್ಯವಾದ ಬೀಜ, ರಸಗೊಬ್ಬರಗಳ ಪರಿಶೀಲನೆ ಕೈಗೊಂಡರು. ನಂತರ ಪಟ್ಟಣದ ವಿವಿಧ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ, ಮಾರಾಟಗಾರರು ರೈತರಿಗೆ ಉತ್ತಮ ಸಲಹೆಯೊಂದಿಗೆ ಗುಣಮಟ್ಟದ ಕೃಷಿ ಪರಿಕರಗಳನ್ನು ಒದಗಿಸಬೇಕು ಹಾಗೂ ಕಡ್ಡಾಯವಾಗಿ ರಶೀದಿ ನೀಡಬೇಕು. ಈ ಸಂದರ್ಭದಲ್ಲಿ ಕೃತಕ ಅಭಾವ ಸೃಷ್ಟಿಸುವುದು, ದರಗಳಲ್ಲಿ ವ್ಯತ್ಯಾಸ ಮಾಡುವಂತ ಚಟುವಟಿಕೆಗಳು ಹಾಗೂ ಮುಖ್ಯವಾಗಿ ದೂರುಗಳು ಕಂಡು ಬಂದಲ್ಲಿ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.



ಜಿಲ್ಲಾ ಕೃಷಿ ಉಪನಿರ್ದೇಶಕ ಚಂದ್ರಕಾಂತ ಪವಾರ, ಜಾ-ರಿದಳದ ಸಹಾಯಕ ಕೃಷಿ ನಿರ್ದೇಶಕ ಎ.ಪಿ.ಬಿರಾದಾರ, ಸಿಂದಗಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಎಚ್.ವೈ.ಸಿಂಗೇಗೋಳ, ಕೃಷಿ ಅಧಿಕಾರಿ ಸೋಮನಗೌಡ ಬಿರಾದಾರ, ರೈತ ಮುಖಂಡ ಅಜೀಜ್ ಯಲಗಾರ, ಸಿಬ್ಬಂದಿ ಹಾಗೂ ಇತರರು ಇದ್ದರು.

# ತಹಶೀಲ್ದಾರ ಪ್ರಕಾಶ ಅವರಿಗೆ ರೈತಸಂಘದಿಂದ ಸನ್ಮಾನ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಿ ಪರಿಹಾರ ಒದಗಿಸುವ ಮೂಲಕ ತಹಶೀಲ್ದಾರರು ಉತ್ತಮ ಕಾರ್ಯ ಮಾಡಿದ್ದಾರೆ. ಅವರ ಸೇವೆ ಶ್ಲಾಘನೀಯ ಎಂದು ರೈತಸಂಘದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರೇಣುಕಾ ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯದಲ್ಲಿ ಮಂಗಳವಾರ ದೇವೂರ ಗ್ರಾಮದ ರಸ್ತೆ ಸಮಸ್ಯೆ ನಿವಾರಿಸಿ ಪರಿಹಾರ ದೊರಕಿಸಿದ ಕಾರಣ ತಹಶೀಲ್ದಾರ ಪ್ರಕಾಶ ಸಿಂದಗಿ ಅವರನ್ನು ಸನ್ಮಾನಿಸಿ ಮಾತನಾಡಿದರು. ಪ್ರತಿಯೊಂದು ಗ್ರಾಮದಲ್ಲಿ ರೈತರು ಜಮೀನುಗಳ ರಸ್ತೆ ವಿಷಯದಲ್ಲಿ ಸಮಸ್ಯೆ ಎದುರಿಸುತ್ತಿದ್ದು, ಕೆಲವರು ಹಲವು ವರ್ಷಗಳಿಂದ ಪೊಲೀಸ್ ಠಾಣೆ, ನ್ಯಾಯಾಲಯಗಳಿಗೆ ಅಲೆದಾಡುತ್ತಿದ್ದಾರೆ. ಅದಾಗ್ಯೂ ನ್ಯಾಯ ದೊರೆತಿಲ್ಲ. ಆದರೆ ನಮ್ಮ ತಾಲ್ಲೂಕಿನ ತಹಶೀಲ್ದಾರರು ದಿಟ್ಟ ಕ್ರಮ ಕೈಗೊಂಡು ರಸ್ತೆ ಸಮಸ್ಯೆಗೆ ಪರಿಹಾರ ನೀಡಿದ್ದಾರೆ. ಅವರಿಗೆ ಗ್ರಾಮಸ್ಥರ ಪರವಾಗಿ ಅಭಿನಂದನೆ ಎಂದರು.

ರೈತಸಂಘದ ಗ್ರಾಮ ಘಟಕದ ಅಧ್ಯಕ್ಷ ಹಣಮಂತ್ರಾಯ ಪಾಟೀಲ, ಸೋಮು ಸಜ್ಜನ, ಶಿವಪುತ್ರಗೌಡ ಪಾಟೀಲ, ಶ್ರೀಮಂತ ರಾಠೋಡ, ಅಮೀನಪ್ಪಗೌಡ ಬಿರಾದಾರ, ಸುರೇಶ ಪವಾರ, ಸಾಹೇಬಗೌಡ ಬಿರಾದಾರ, ಮಂಜುನಾಥ ನಾಯಿಕ, ಮಡಿವಾಳಪ್ಪಗೌಡ ಬಿರಾದಾರ, ತುಕಾರಾಮ ರಾಠೋಡ, ಸಿದ್ಧನಗೌಡ ಬಿರಾದಾರ ಇದ್ದರು.

# ಭೂ-ಮಾಫಿಯಾ ಮಟ್ಟ ಹಾಕಲು ಮಾಜಿ ಸಚಿವ ಪಟ್ಟಣಶೆಟ್ಟಿ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದಲ್ಲಿ ನಕಲಿ ಭೂ ದಾಖಲೆ ಸೃಷ್ಠಿಸಿ ಜನರನ್ನು ವಂಚಿಸುತ್ತಿರುವ ಭೂ-ಮಾಫಿಯಾವನ್ನು ಸಂಪೂರ್ಣವಾಗಿ ಮಟ್ಟ ಹಾಕಬೇಕೆಂದು ಮಾಜಿ ಸಚಿವ ಅಪ್ಪಾಸಾಹೇಬ(ಅಪ್ಪು) ಮ. ಪಟ್ಟಣಶೆಟ್ಟಿ ಆಗ್ರಹಿಸಿದ್ದಾರೆ.

ಈ ಕುರಿತು ಮಂಗಳವಾರ ವಿಜಯಪುರ ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿಗಳನ್ನು ಬೇಟಿ ಮಾಡಿ ಮನವಿ ಮಾಡಿದ ಅವರು, ನಗರದಲ್ಲಿ ನಕಲಿ ಭೂ-ದಾಖಲೆ ಸೃಷ್ಟಿ ಮಾಡಿ ಜನರನ್ನು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡುತ್ತಿರುವ ಅನೇಕ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಬಡಜನರು ನಿತ್ಯ ಶೋಷಣೆಗೊಳಗಾಗುತ್ತಿದ್ದಾರೆ. ಜಮೀನು ಹಾಗೂ ನಿವೇಶನಗಳ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಉಪನೋಂದಣಿ ಅಧಿಕಾ-ರಿಗಳ ಕಚೇರಿಯಲ್ಲಿ ಖರೀದಿ ಹಾಗೂ ಮಾರಾಟ ಮಾಡುವ ಕಾನೂನು ಬಾಹಿರ ಕೃತ್ಯಗಳು ಅವ್ಯಾಹತವಾಗಿ ನಡೆದಿವೆ. ಜನರನ್ನು ವಂಚಿಸುವ ವ್ಯವಸ್ಥಿತ ಜಾಲವೇ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ. ಈ ಜಾಲಕ್ಕೆ ಈಗಾಗಲೇ ನೂರಾರು ಜನ ಹಣ-ಆಸ್ತಿ ಕಳೆದುಕೊಂಡಿದ್ದಾರೆ. ಇಂತಹ ವಂಚಕರ ಜಾಲ ವಿಜಯಪುರ ಜಿಲ್ಲೆ ಹಾಗೂ ನಗರದಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಸಾಕಷ್ಟು ಬಡ ಜನರು ಈಗಾಗಲೇ ಮೋಸ ಹೋಗಿದ್ದಾರೆ. ಕಷ್ಟಪಟ್ಟು ದುಡಿದು, ಸಾಲ-ಸೋಲ ಮಾಡಿ ನಿವೇಶನ, ಜಮೀನು ಖರೀದಿ ಮಾಡುವ ಬಡವರು, ಈ ರೀತಿಯ ವಂಚನೆಗೆ ಒಳಗಾಗಿ ತಮ್ಮ ಆಸ್ತಿ ಕಳೆದುಕೊಂಡು ಕಷ್ಟ ಅನುಭವಿಸುತ್ತಿದ್ದಾರೆ.



ಈ ಜಾಲಕ್ಕೆ ಸಿಲುಕಿ ವಂಚನೆಗೊಳಗಾದವರು ಹಾಗೂ ಜಮೀನು ಕಳೆದುಕೊಂಡವರು ಪೊಲೀಸ್ ಠಾಣೆಗೆ ದೂರು ನೀಡಿದರೂ ಯಾವ ಪ್ರಯೋಜನವೂ ಆಗುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ ನೊಂದ ಬಡವ-ರಿಗೆ ನ್ಯಾಯ ದೊರಕುತ್ತಿಲ್ಲ. ಬಡಜನರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಇಂತಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತನಿಖೆ ಮಾಡಲು ವಿಶೇಷ ತನಿಖಾ ತಂಡ ರಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಕೂಡಲೇ ಈ ರೀತಿಯ ಪ್ರಕರಣಗಳನ್ನು ಬೇಧಿಸಿ ಮೂಲ ಮಾಲೀಕರಿಗೆ ಅವರ ಜಮೀನು-ನಿವೇಶನ ಪುನ: ಹಂಚಿಕೆಯಾಗುವ ನಿಟ್ಟಿನಲ್ಲಿ ವಿಶೇಷ ಕಾರ್ಯಾಚರಣೆ ಮಾಡಬೇಕು. ಜಿಲ್ಲೆಯಲ್ಲಿ ಈ ರೀತಿಯ ಭೂ ಮಾಫಿಯಾವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಪಟ್ಟಣಶೆಟ್ಟಿ ಆಗ್ರಹಿಸಿದರು.

# ಪುರಸಭೆಯ ಸದಸ್ಯೆಯ ಹೇಳಿಕೆ ಖಂಡನೀಯ :ವಾರ್ಡ್ ನಿವಾಸಿಗಳು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ವಾರ್ಡ ನಂ 15 ರ ನಿವಾಸಿಗಳು ಕುಡಿಯುವ ನೀರು ಸೇರಿದಂತೆ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇಲ್ಲಿನ ಸಮಸ್ಯೆಗಳ ಕುರಿತು ವಾರ್ಡ ನ ಸದಸ್ಯರ ಪತಿಗೆ ಸಾಕಷ್ಟು ಬಾರಿ ಕರೆ ಮಾಡಿದರೂ ನಮ್ಮ ಕರೆ ಸ್ವೀಕರಿಸದಿದ್ದಾಗ ನಾವು ಅನಿವಾರ್ಯವಾಗಿ ಪುರಸಭೆಗೆ ಖಾಲಿ ಕೊಡಗಳನ್ನು ಹಿಡಿದು ಹೋಗಿದ್ದೆವು. ಆದರೆ ನಾವು ಈ ವಿಷಯದಲ್ಲಿ ರಾಜಕೀಯ ಮಾಡುತ್ತಿದ್ದೇವೆ, ಈ ವಾರ್ಡ ನ ಸದಸ್ಯರೇ ಅಲ್ಲ ಎಂದು ಈ ವಾರ್ಡನ ಸದಸ್ಯೆ ಮತ್ತು ಮಾಜಿ ಪುರಸಭೆ ಅಧ್ಯಕ್ಷರು ಪತ್ರಿಕಾಗೋಷ್ಠಿ ನಡೆಸಿ ಹೇಳಿಕೆ ನೀಡಿದ್ದು ಖಂಡನೀಯ ಎಂದು ಕಳೆದ ಕೆಲ ದಿನಗಳ ಹಿಂದೆ ಪುರಸಭೆ ಎದುರು ಖಾಲಿ ಕೊಡಗಳನ್ನು ಹಿಡಿದು ದಿಢೀರ ಪ್ರತಿಭಟನೆ ನಡೆಸಿದ ನಿವಾಸಿಗಳು ಹೇಳಿದರು.



ಪಟ್ಟಣದ ಕುಂಬಾರಗಲ್ಲಿರುವ ದ್ಯಾಮವ್ವ ದೇವಿ ದೇವಸ್ಥಾನದ ಎದುರು ಸೋಮುವಾರ ಸಂಜೆ ಯಾಸೀನ ಅತ್ತಾರ, ಸೊಹೇಲ್ ಚೌದರಿ, ಇಸ್ರಾಯಿಲ್ ಇಂಡಿ-ಕಾರ, ಆಸೀಫ ನಿಡಗುಂದಿ, ಜಬ್ಬಾರ ಗೋಲಂದಾಜ ಸೇರಿದಂತೆ ಕೆಲ ನಿವಾಸಿಗಳು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ನಾವು 15ನೇ ವಾರ್ಡ ನ ಸದಸ್ಯರು. ನಾವು ಈ ವಾರ್ಡನ ಸದಸ್ಯರೇ ಅಲ್ಲ ಎಂದು ಹೇಳುತ್ತಿರುವ ಇವರು ರಾಜ-ಕೀಯ ಮಾಡುತ್ತಿದ್ದಾರೆ. ನಾವು ಕಳೆದ ಕೆಲವುಗಳ ಹಿಂದೆ ಇಲ್ಲಿನ ವಿದ್ಯುತ್ ಕಂಬ, ನೀರು, ಕೈಬೋರ್ ಕೆಟ್ಟಿರುವ ಸೇರಿದಂತೆ ಸಾಕಷ್ಟು ಸಮಸ್ಯೆಗಳನ್ನು ಹೇಳಿದರೂ ಯಾವುದೇ ಪ್ರಯೋಜನವಾಗಿಲ್ಲ. ಪುರಸಭೆಯ ವಾ□□□□□ಪ್ ನ ಗ್ರೂಪ್ ಗೆ ಹಾಕಿದರೂ ಸಮಸ್ಯೆ ಬಗೆರೆದಿರಲಿಲ್ಲ ಹಾಗಾಗಿ ನಾವು ಹೋರಾಟದ ಹಾದಿ ಹಿಡಿಯಬೇಕಾಯಿತು ವಿನಃ ಇದರಲ್ಲಿ ರಾಜಕೀಯ ಮಾಡೋ ಮನಸ್ಥಿತಿಯವರು ನಾವಲ್ಲ ಎಂದು ಸಮಸ್ಯೆಗಳ ಮತ್ತು ಕರೆ ಮಾಡಿದ ವಿವರಗಳ ಫೋಟೋ ತೋರಿಸಿ ಹೇಳಿದರು.

ಶೌಚಾಲಂ೨ುಗಳನ್ನು ನಿರ್ಮಿಸಿರುವದಾಗಿ ಮಾಧ್ಯಮದವರೆದುರು ಹೇಳಿಕೊಂಡಿರುವ ಇವರು ಸದಸ್ಯರಾಗಿ ಶೌಚಾಲಯ ನಿರ್ಮಿಸಿಲ್ಲ. ಹಿಂದಿನ ಅವಧಿಯಲ್ಲಿ ಇವರು ಸದಸ್ಯರೂ ಇರಲಿಲ್ಲ. ತಾವೊಬ್ಬ ಗುತ್ತಿಗೆದಾರರಾಗಿ ಈ ಶೌಚಾಲಯಗಳನ್ನು ನಿರ್ಮಿಸಿದ್ದಾರೆಣಟಿ-ಜಜಜಿಟಿಜಜ. ಅಲ್ಲದೇ ರಸ್ತೆ ಮಾಡಿರುವದಾಗಿ ಹೇಳಿಕೊಂಡಿರುವ ಇವರು ಯಾವ ಅವಧಿಯಲ್ಲಿ ಈ ರಸ್ತೆಯಾಗಿದೆ, ಅನುದಾನ ಬಿಡುಗಡೆಯಾಗಿದ್ದು ಯಾವಾಗ? ಎಸ್ಟಿಮೇಟ್ ಏನಿದೆ? ರಸ್ತೆ ಮಾಡಿದ ಗುತ್ತಿಗೆದಾರರು ಯಾರು ಅನ್ನೋದನ್ನ ಬಹಿರಂಗ ಪಡಿಸಲಿ ಎಂದು ಸವಾಲು ಹಾಕಿದರು.

ನಾವು ಈ ವಾರ್ಡ ಸದಸ್ಯರು ಅಲ್ಲ ಎಂದರೆ ನಮ್ಮ ವಾರ್ಡ ಯಾವದೆಂದು ಮತ್ತು ಸಮಸ್ಯೆ ಇರುವ ವಾರ್ಡ ಯಾವದೆಂದು ನಮಗೆ ಪುರಸಭೆ ಮುಖ್ಯಾಧಿಕಾರಿಗಳು ಕೂಡಲೇ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ನಾವು ನಮ್ಮ ಎಲ್ಲ ದಾಖಲೆಗಳನ್ನು ತೆಗೆದುಕೊಂಡು ಪುರಸಭೆ ಎದುರು ಧರಣಿ ಕೂರುತ್ತೇವೆ ಎಂದು ಆಕ್ರೋಷ ಹೊರಹಾಕಿದರು. ಸದಸ್ಯರು ಇಲ್ಲ ಸಲ್ಲದ ಹೇಳಿಕೆ ನೀಡಿದ್ದು ಕೂಡಲೇ ನಿವಾಸಿಗಳಿಗೆ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಬೀಬಿಮರಿಯಂ ಚೌದರಿ, ಶಿವಗಂಗವ್ವ ಚಿನಿವಾರ, ರಾಮತಬಿ ಅತ್ತಾರ, ನೂರಜಾನ ಬಾಗವಾನ, ಹುಸೇನಮಾ ಬಾಗವಾನ, ನಾಸಿರ ಮುಲ್ಲಾ ಸೇರಿದಂತೆ ಮತ್ತೀತರರು ಇದ್ದರು.

# ಭಾರತದ ಜಾನಪದ ಸಂಸ್ಕೃತಿ ವಿಶ್ವಕ್ಕೆ ಮಾದರಿ :ಬಾಳನಗೌಡ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಾನಪದ ಸಾಹಿತ್ಯ ಕೇವಲ ಮನರಂಜನೆಯ ವಸ್ತು ಅಲ್ಲ. ಅದು ಸಾರ್ವತ್ರಿಕ ಮೌಲ್ಯಗಳನ್ನು ಹಾಡು, ಗಾದೆ, ಒಡಪು, ಕಥೆ ಮತ್ತು ನುಡಿಗಳ ಮೂಲಕ ಜನತೆಗೆ ಕಲಾತ್ಮಕವಾಗಿ ತಲುಪಿಸಿ ಬದುಕು ಸುಧಾರಿಸುವ ಶ್ರೇಷ್ಠ ಪರಂಪರೆಯಾಗಿದೆ ಎಂದು ಕನ್ನಡ ಜಾನಪದ ಪರಿಷತ್ ವಿಜಯಪುರ ಜಿಲ್ಲಾಧ್ಯಕ್ಷ ಬಾಳನಗೌಡ ಪಾಟೀಲ (ಪಡಗಾನೂರ) ಅಭಿಪ್ರಾಯಪಟ್ಟರು

ಕನ್ನಡ ಜಾನಪದ ಪರಿಷತ್ ತಾಲೂಕಾ ಘಟಕ ನಿಡಗುಂದಿ ಹಾಗೂ ಮಹರ್ಷಿ ವಾಲ್ಮೀಕಿ ಸಾಂಸ್ಕೃಣಟಿಜಜಜಟಿಜಜತಿಕ ಸಂಘ ಮುದ್ದಾಪುರ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮುದ್ದಾಪುರ ಮಾರುತೇಶ್ವರ ದೇವಾಲಯದಲ್ಲಿ ಜಾನಪದ ಕಲಾ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ನಮ್ಮ ಹಳ್ಳಿಗಳು ಜಾನಪದ ಸಂಸ್ಕೃತಿಯನ್ನು



ಜೋಪಾನವಾಗಿ ಉಳಿಸಿಕೊಂಡು ಬಂದಿರುವುದು ಹೆಮ್ಮೆಯ ವಿಷಯವಾಗಿದೆ . ಸಮಾಜ ಮತ್ತು ಸಂಘ ಸಂಸ್ಥೆಗಳು ಕಲಾವಿದರನ್ನು ಬೆಳೆಸಬೇಕೆಂದು ಮನವಿ ಮಾಡಿದರು.

ನಿಡಗುಂದಿ ತಾಲೂಕಾ ಕ ಜಾ ಪ ಅಧ್ಯಕ್ಷ ವೈ ಎಸ್ ಗಂಗಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಕನ್ನಡ ಜಾನಪದ ಪರಿಷತ್ ವತಿಯಿಂದ ಹಳ್ಳಿಗಳಲ್ಲಿ ಕಲಾವಿದರನ್ನು ಗುರುತಿಸಿ ಅವರನ್ನು ಬೆಳೆಸುವ ಕೆಲಸ ಮಾಡುತ್ತಾ, ಕಲೆ-ಕಲಾವಿದರಗೆ ರಕ್ಷಣೆ ಒದಗಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಮುದ್ದೇಬಿಹಾಳ ತಾಲ್ಲೂಕಾ ಕ ಜಾ ಪ ಅಧ್ಯಕ್ಷ ಎ ಆರ್ ಮುಲ್ಲಾ ನಮ್ಮ ಹಿರಿಯರು ಜನಪದ ನುಡಿಗಳ ಮೂಲಕ ಜನತೆಗೆ ಹೆಜ್ಜೆ ಹೆಜ್ಜೆಗೂ ಅರಿವು ಮೂಡಿಸುತ್ತ ಮೌಲ್ಯಯುತ ಬದುಕು ಕಟ್ಟಿಕೊಳ್ಳಲು ಅಸರೆಯಾಗಿದ್ದಾರೆ ಎಂದರು .

ಶಿಕ್ಷಕರು ಹಾಗೂ ಕಲಾವಿದರಾದ ಸಿದ್ದು ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಕ ಜಾ ಪ ಬಸವನಬಾಗೇವಾಡಿ ಆಧ್ಯಕ್ಷ ದೇವೇಂದ್ರ ಗೋನಾಳ,ದೇವರಹಿಪ್ಪರಗಿ ಅಧ್ಯಕ್ಷ ನಾನಾಗೌಡ ಪಾಟೀಲ ವಲಯ ಅಧ್ಯಕ್ಷ ಚಾಂದಸಾಬ ವಾಲಿಕಾರ, ಜಿಲ್ಲಾ ಘಟಕದ ಸದಸ್ಯ ಮೌಲಸಾಹೇಬ ಜಹಾಗೀರದಾರ ಎಸ್ ಅಯ್ ವಗ್ಗರ ಉಪಸ್ಥಿತ-ರಿದ್ದರು.

ಕಾರ್ಯಕ್ರಮದಲ್ಲಿ ಹಳಿಯಾಳದ ಸೂತ್ರದ ಗೊಂಬೆ, ಭರತನಾಟ್ಯ, ತಮಟೆವಾದ್ಯ, ಉಪ್ಪಲದಿನ್ನಿ ಹೆಜ್ಜೆಮೇಳ, ಮುದ್ದಾಪುರ ಸಂಪ್ರದಾಯ ಪದ ಸೇರಿದಂತೆ ಸುಮಾರು ಹದಿನೈದು ಕಲಾ ತಂಡಗಳ ಪ್ರದರ್ಶನ ನಡೆಯಿತು.

# ವಿಶ್ವ ಋತುಚಕ್ರ ನೈರ್ಮಲ್ಯ ದಿನ ಆಚರಣೆ

**ಉದಯರಶ್ಮಿ ನ್ಯೂಸ್**

ಚಡಚಣ: ಸಮುದಾಯ ಆರೋಗ್ಯ ಕೇಂದ್ರ ಚಡಚಣ ಇವರ ಸಂಯುಕ್ತ ಆಶ್ರಯದಲ್ಲಿ ಚಡಚಣದ 15ನೇ ನಂಬರ ಅಂಗನವಾಡಿ ಕೇಂದ್ರದಲ್ಲಿ ಇಂದು ವಿಶ್ವ ಋತುಚಕ್ರ ನೈರ್ಮಲ್ಯ ದಿನ ಆಚರಣೆ ಮಾಡಲಾಯಿತು.



ಆರೋಗ್ಯ ಆಪ್ತ ಸಮಾಲೋಚಕರಾದ ಶ್ರೀ ಪ್ರಶಾಂತ ಸಾಳುಂಕೆ ಮಾತನಾಡಿ, ಋತುಸ್ರಾವದಲ್ಲಿ ಸ್ವಚ್ಛತೆ ಜೊತೆ ಕಬ್ಬಿಣದ ಅಂಶದ ಆಹಾರ ಸೇವನೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಆರೋಗ್ಯ ಮಿತ್ರರಾದ ಸಂಜೀವ ರೋಗಿ ಹಾಗೂ ಅಂಗನವಾಡಿ ಮೇಲ್ವಿಚಾರಕರು ಶ್ರೀಮತಿ ನೂತುನಾ ಬಿರಾದಾರ ಹಾಗೂ ಶ್ರೀಮತಿ ಪವಟೆ ಮಾನಂದಾ. ಹಸಿನಾ ನದಾಫ ಹಾಗೂ ಆಶಾ ಕಾರ್ಯಕರ್ತೆಯರು ಇದ್ದರು.

# ಸಚಿವ ನಾಗೇಂದ್ರ ವಜಾಗೆ ಕುಡಿಗನೂರ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ :ಶಿವಮೊಗ್ಗದ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಅವರ ಆತ್ಮಹತ್ಯೆಗೆ ಕಾರಣರಾದ ಪರಿಶಿಷ್ಟ ವರ್ಗಗಳ ಕಲ್ಯಾಣ ಖಾತೆ ಸಚಿವ ನಾಗೇಂದ್ರ ಅವರನ್ನು ತಕ್ಷಣವೇ ವಜಾ ಮಾಡಿ, ಬಂಧಿಸಿ ತನಿಖೆ ನಡೆಸುವಂತೆ ಬಿಜೆಪಿಯ ವ್ಯಾಪಾರ ಮತ್ತು ವಾಣಿಜ್ಯ ಪ್ರಕೋಷ್ಠದ ರಾಜ್ಯ ಸಂಚಾಲಕ ವಿಜಯಕುಮಾರ ಕುಡಿಗನೂರ ಅವರು ಆಗ್ರಹಿಸಿದರು.

ಆತ್ಮಹತ್ಯೆ ಮಾಡಿಕೊಂಡಿರುವ ಅಧಿಕಾರಿ ಚಂದ್ರಶೇಖರ್ ಬರೆದಿಟ್ಟ ಡೆತ್ ನೋಟ್ನಲ್ಲಿ, ಪರಿಶಿಷ್ಟ ಪಂಗಡದ ಬಡವರಿಗೆ ಸೇರಬೇಕಾದ 187 ಕೋಟಿ ರೂ.ಗಳನ್ನು ಸಚಿವರ ಸೂಚನೆ ಮೇರೆಗೆ ನಕಲಿ ಖಾತೆಗಳಿಗೆ ವರ್ಗಾಯಿಸಿ ಅವ್ಯವಹಾರ ನಡೆಸಲಾಗಿದೆ ಎಂದು ನೇರ ಆರೋಪ ಮಾಡಿದ್ದಾರೆ. ನಿಗಮದ ಆಡಳಿತ ನಿರ್ದೇಶಕ ಹಾಗೂ ಅಧಿಕಾರಿಗಳು ನಕಲಿ ಖಾತೆಗಳನ್ನು ತೆರೆದು ಈ ಹಣವನ್ನು ವರ್ಗಾವಣೆ ಮಾಡಿಕೊಂಡಿದ್ದಾರೆ. ಹೀಗಾಗಿ ಈ ಎಲ್ಲರ ವಿರುದ್ಧ ತಕ್ಷಣವೇ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರಕ್ಕೆ ಇದಕ್ಕಿಂತ ದೊಡ್ಡ ಸಾಕ್ಷ್ಯ ಬೇರೆ ಅಗತ್ಯವಿಲ್ಲ. ಅಂದು ಬಿಜೆಪಿ ಸರಕಾರವಿದ್ದಾಗ ಸಂತೋಷ ಪಾಟೀಲ್ ಆತ್ಮಹತ್ಯೆ ಪ್ರಕರಣದಲ್ಲಿ ಆಗಿನ ವಿಪಕ್ಷ ನಾಯಕ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಿನ ಕಂದಾಯ ಸಚಿವ ಕೆ.ಎಸ್.ಈಶ್ವರಪ್ಪನವರ ವಜಾಕ್ಕೆ ಆಗ್ರಹಿಸಿದ್ದರು. ಕಾನೂನು,



ಸಂವಿಧಾನ ಎಂದೆಲ್ಲ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತ ಭಾರೀ ಗದ್ದಲವೆಬ್ಬಿಸಿದ್ದರು. ಈಗ ಅವರದೇ ಸರಕಾರವಿದೆ. ಅದೇ ಮಾತುಗಳನ್ನು ಈಗ ಹೇಳಲಿ ನೋಡೋಣ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದರು. ಈ ಪ್ರಕರಣದಲ್ಲಿ ಸಚಿವ ನಾಗೇಂದ್ರ ಮತ್ತು ಇಲಾಖೆಯ ಆಪಾದಿತ ಅಧಿಕಾರಿಗಳ ವಿರುದ್ಧ ಕೊಲೆ ಪ್ರಕರಣ ಹಾಗೂ ಎಸ್ಸಿ, ಎಸ್ಟಿ ಕಾಯ್ದೆಯನ್ವಯ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

ಬರೀ ಲೂಟಿಯಲ್ಲ, ಹಗಲು ದರೋಡೆ..


ಈ ಸರಕಾರದಲ್ಲಿ ನಡೆಯುತ್ತಿರುವುದು ಬರೀ ಲೂಟಿಯಲ್ಲ, ಹಗಲು ದರೋಡೆ. ಅಧಿಕಾರಿ ಚಂದ್ರಶೇಖರ್ ಸಾವಿಗೆ ಸಚಿವರೇ ನೇರ ಕಾರಣವಾಗಿದ್ದು, ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟಿನ ಹಾಲಿ ನ್ಯಾಯಾಧೀಶ-ರಿಂದ ಸಮಗ್ರ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು ಎಂದು ವ್ಯಾಪಾರ ಮತ್ತು ವಾಣಿಜ್ಯ ಪ್ರಕೋಷ್ಠದ ರಾಜ್ಯ ಸಂಚಾಲಕ ವಿಜಯಕುಮಾರ ಕುಡಿಗನೂರ ಹೇಳಿದ್ದಾರೆ.

# ಮಕ್ಕಳ ಪೋಷಕರಿಗೆ ಕಳಪೆ ಆಹಾರ ಪೂರೈಕೆ :ಆರೋಪ

**ಉದಯರಶ್ಮಿ ನ್ಯೂಸ್**

ಇಂಡಿ: ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೋಷಕರಿಗೆ ನೀಡುತ್ತಿರುವ ಘಟನೆ ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದಲ್ಲಿ ಬೆಳಕಿಗೆ ಬಂದಿದೆ.

ಶಿಶು ಅಭಿವೃದ್ಧಿ ಯೋಜನೆ ಇಂಡಿಯವರು ಮಕ್ಕಳ ಪೋಷಕ-ರಿಗೆ ಕಳಪೆ ಗುಣಮಟ್ಟದ ಬೆಲ್ಲ, ಖಾರದ ಪುಡಿ, ದವಸ ಧಾನ್ಯಗಳು ನೀಡುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಅಲ್ಲದೇ, ಪಾಕೇಟ್ ಮೇಲಿನ ದಿನಾಂಕ ಅಳಿಸಿಹಾಕಿ ಡೇಟ್ ಬಾರ್ ಆಗಿರುವ ಪದಾರ್ಥ-ಗಳನ್ನು ನೀಡಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದು,



ಅದಕ್ಕಾಗಿ ಸಂಬಂಧಪಟ್ಟ ಅಧಿಕಾ-ರಿಗಳು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

# ಉಪ್ಪಾರ ಸಮಾಜಕ್ಕೆ ಪರಿಷತ್ ಸ್ಥಾನ ನೀಡಲು ಮನವಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ರಾಜಕೀಯ, ಶೈಕ್ಷಣಿಕ, ಸಾಮಾಜಿಕವಾಗಿ ಹಿಂದುಳಿದ ಉಪ್ಪಾರ ಸಮಾಜಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಉಪ್ಪಾರ ಸಂಘದ ಕಾರ್ಯದರ್ಶಿ ಮಹಾಲಿಂಗ ಉಪ್ಪಾರ ಒತ್ತಾಯಿಸಿದ್ದಾರೆ.

ಉಪ್ಪಾರ ಸಮುದಾಯ ಏಕೈಕ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವ-ರಿಗೆ ಸಚಿವ ಸ್ಥಾನ ನೀಡಿಲ್ಲ.ಜತೆಗೆ ಮೇಲ್ಮನೆಯಲ್ಲಿ ಒಬ್ಬರು ಸದಸ್ಯರಿಲ್ಲ. ಆದ್ದರಿಂದ ಧ್ವನಿಯಿಲ್ಲದ ಸಮಾಜಕ್ಕೆ ರಾಜಕೀಯ ಶಕ್ತಿ ತುಂಬಲು ವಿಧಾನ ಪರಿಷತ್ ಸ್ಥಾನ ನೀಡುವಂತೆ ಕೋ-ರಿದ್ದಾರೆ.

# ವಿದ್ಯಾರ್ಥಿಗಳಲ್ಲಿ ಶಿಕ್ಷಣಕ್ಕಿಂತ ಸಂಸ್ಕಾರ ಮುಖ್ಯ :ಜೈನಾಪುರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಮಾಜವನ್ನು ಸಂಸ್ಕಾರಯುತವಾಗಿ ಮಾಡಲು ಶಿಕ್ಷಣದಿಂದ ಮಾತ್ರ ಸಾಧ್ಯ ಮಕ್ಕಳಿಗೆ ಎಳೆಯ ಹಂತದಲ್ಲೇ ದೊರೆಯುವ ಶಿಕ್ಷಣ ಗುಣಮಟ್ಟವಾಗಿದ್ದರೆ ನಾಳಿನ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಆ ಹಂತದಲ್ಲಿ ಆರಂಭಿಕ ಶಿಕ್ಷಣವನ್ನು ಉತ್ತಮ ಶಿಕ್ಷಣವನ್ನು ನೀಡಿ ಭಾರತವನ್ನು ಭವಿಷ್ಯದಲ್ಲಿ ಭದ್ರ ಪಡಿಸಬೇಕಾಗಿದೆ ಎಂದು ಭಾರತ ಯುವ ವೇದಿಕೆ ಚಾರಿಟೇಬಲ್ ಫೌಂಡೇಶನ್ ಅಧ್ಯಕ್ಷ ಸುನೀಲ ಜೈನಾಪುರ ಅವರು ಹೇಳಿದರು.

ನಗರದ ಆಲಕುಂಟೆ ಬಡಾವಣೆಯಲ್ಲಿ ಪೀನ್ಯಾಕಲ್ ಕ-ರಿಯರ್ ಬಿಲ್ಡರ್ಸ್ ನಲ್ಲಿ ಜರುಗಿದ ಬೇಸಿಗೆ ಶಿಬಿರ ಮುಕ್ತಾಯ ಹಾಗೂ ನೂತನ ಪೂರ್ವ ಪ್ರಾಥಮಿಕ ಶಾಲೆ ಉದ್ಘಾಟನೆ ಮತ್ತು ಎಸ್ ಎಸ್ ಎಲ್ ಸಿ ಯಲ್ಲಿ □□□ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಎಳೆಯ ವಯಸ್ಸಿನಲ್ಲೇ ವೈಜ್ಞಾನಿಕ ಮನೋಭಾವ ಬೆಳೆಸಬೇಕು ಮತ್ತು ಕಲಿಕಾ ಹಾಗೂ ಗ್ರಹಿಕ ಸಾಮರ್ಥ್ಯ ಹೆಚ್ಚಿಸುವಲ್ಲಿ ಶಿಕ್ಷಕ – ಪಾಲಕರ ಜವಾಬ್ದಾರಿ ಗುರುತರವಾಗಿದೆ ಎಂದರು.

ಸಾಹಿತಿ ಶಿವಶರಣಪ್ಪ ಶಿರೂರ್ ಮಾತನಾಡಿ, ಮಕ್ಕಳಿಗೆ ಶಿಕ್ಷಣದಲ್ಲಿ ದೇಶಪ್ರೇಮದ ಪಠ್ಯಗಳನ್ನು ಹೆಚ್ಚಿಸಬೇಕು ಸದೃಢ ಭಾರತದ ಸದ್ದುದ್ದೇಶದಿಂದ ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕು. ಭಾರತೀಯ ಸಂಸ್ಕೃತಿಯ ಆಚಾರ ವಿಚಾರಗಳನ್ನು ಅಳವಡಿಸಿಕೊಳ್ಳುವ ಮೂಲಕ ಅತ್ಯುತ್ತಮ ನಾಗರಿಕರಾಗಿ ರೂಪಿಸಬೇಕು ಎಂದರು.

ಪಠ್ಯ ವಿಷಯದೊಂದಿಗೆ ಜೀವನ ಶಿಕ್ಷಣ ನೀಡುವ ಅನಿವಾರ್ಯತೆ ಇದೆ. ಮಕ್ಕಳು ಸರ್ವೋಮುಖ ಅಭಿವೃದ್ಧಿ ಹೊಂದಬೇಕು ಮಗುವಿನ ಶಾರೀರಿಕ ಬೌದ್ಧಿಕ ಭಾವಾತ್ಮಕ ಮತ್ತು ಸಮಾಜಿಕ ನಡುವಳಿಕೆಗಳನ್ನು ಕಲಿಸುವ ಮತ್ತು ತಿದ್ದುವ ಜವಾಬ್ದಾರಿ ಶಿಕ್ಷಕ ಮತ್ತು ಪಾಲಕರ ಮೇಲಿದೆ ಎಂದು ಹೇಳಿದರು.

ಡಿಸಿಸಿ ಬ್ಯಾಂಕಿನ ರಾಜು ಅವರು ಮಾತನಾಡಿ, ನಿರಂತರ ಓದು ವಿದ್ಯಾರ್ಥಿಗಳಿಗೆ ವಿಷಯದ ಮೇಲೆ ಪ್ರಭುತ್ವ ಸಾಧಿಸಲು ಸಾಧ್ಯವಾಗುತ್ತದೆ ಉತ್ತಮ ಆರೋಗ್ಯ ಸಂಪಾದಿಸಲು ಪೌಷ್ಟಿಕ ಆಹಾರ ನಿಮಿತ ವ್ಯಾಯಾಮ ಮತ್ತು ಉತ್ತಮ ಅಭಿವೃದ್ಧಿಗಳನ್ನು




ಬೆಳೆಸಿಕೊಳ್ಳಬೇಕು ಎಂದರು.

ಆರ್ ಎಸ್ ಎಸ್ ಪ್ರಮುಖ ಸಿದ್ದು ಕಲರಗಿ ಅವರು ವಿದ್ಯಾರ್ಥಿಗಳು ಋಣಾತ್ಮಕ ಆಲೋಚನೆಗಳನ್ನು ಬದಿಗಿರಿಸಿ ಶ್ರದ್ಧೆ ಮತ್ತು ಪ್ರಮಾಣ ಕತೆಯನ್ನು ರೂಡಿಸಿಕೊಂಡಲ್ಲಿ ಉತ್ತಮ ವ್ಯಕ್ತಿತ್ವ ನೂರುಪಿಸಿಕೊಳ್ಳಬಹುದು. ಸಕರಾತ್ಮಕ ಯೋಚನೆಗಳಿಂದ ಕಲಿಕೆಯಲ್ಲಿ ಭಾವನಾತ್ಮಕ ತೊಡಕುಗಳನ್ನು ತೊಡೆದು ಓದಿನ ವೇಗವನ್ನು ಹೆಚ್ಚಿಸಬಹುದೆಂದರು.

ಕಾರ್ಯಕ್ರಮದಲ್ಲಿ ಸಿದ್ದು ಕಲರಗಿ, ಶಿವಕುಮಾರ್ ನೇಕಾರ್, ಕಾಂತೇಶ್ ದಾಶಾಲ್, ದೇವಿಂದ್ರ ರಾಥೋಡ್, ಮಹೇಶ್ ಕುಮಾರ್ ಪತ್ತಾರ್, ವಿಟ್ಟಲ್ ಅಲ್ಕುಂಟೆ, ಅಕ್ಷಯ್ ಹಿರೇಮಠ, ಬಾಪುರಾಯ್ ಮೆಡಗಾರ್, ಉಪನ್ಯಾಸಕಿ ಕುಮಾರಿ ಮಂಗಳ, ಶ್ರೀಮತಿ ಗೀತಾ, ಶ್ರೀಮತಿ ಬೋರಮ್ಮ, ಕುಮಾರಿ ಪ್ರೀತಿ ಬಸುರ್, ಪ್ರೀತಿ ಕನಸೆ, ಮುಂತಾದವರು ಉಪಸ್ಥಿತರಿದ್ದರು ಕಾರ್ಯಕ್ರಮವನ್ನು ನಿರೂಪಿಸಿದವರು ಕುಮಾರಿ ಪ್ರಜ್ಞಾ ಲೋನಿ, ಸ್ವಾಗತ ನವ್ಯ ಶ್ರೀ ಪತ್ತಾರ್, ವಂದನಾರ್ಪಣೆಯನ್ನು ವರುಣ್ ಬಡಚಿ ನೆರವೇರಿಸಿದರು.

# ನಾಲತವಾಡ: ಸರ್ಕಾರಿ ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: 2024–25 ನೆಯ ಶೈಕ್ಷಣಿಕ ಸಾಲಿಗೆ ಈ ಕೆಳಗೆ ನಮೂದಿಸಿರುವ ಓಆಗಿಖ ನವದೆಹಲಿಯಿಂದ ಸಂಂ-ೋಜನೆಯಾದ 2ವರ್ಷದ ಮತ್ತು 01 ವರ್ಷದ ಕೋರ್ಸಗಳಿಗೆ (ಎಲೆಕ್ಟ್ರಿಷಿಯನ್, ಇಲಕ್ಟ್ರಾನಿಕ್ ಮೆಕ್ಯಾನಿಕ್, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್, ಇಂಡಸ್ಟ್ರಿಯಲ್ ರೋಬೋಟಿಕ್ಸ ಆಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ, ಜೋಡಣೆಗಾರ) ಪ್ರವೇಶ ಆನ್‌ಲೈನ್ (ಭಿಣಣಜ.ಇಚಿಡಿಟಿಚಿಣಚಿಇಚಿ. ಠಡಿತಿಎಟ) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಾಗೂ ಖುದ್ದಾಗಿ ಕಾಲೇಜಿನಲ್ಲಿ ಕೂಡ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಜೂನ್ 3 ಕೊನೆಯ ದಿನವಾಗಿದೆ.

ಮಹಿಳಾ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಾಲತವಾಡದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಅಥವಾ ದೂರವಾಣಿ ಮುಖಾಂತರ (8050322980 ,9986123893 , 9008692270 ) ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಪೂಜಪ್ಪ ಪೂಜಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೆಟ್ರೋಲ್ ಎರಚಿ ಬೆಂಕಿ ಹಚ್ಚಲಾದ ಪ್ರಕರಣಕ್ಕೆ ತಿರುವು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ರವಿವಾರ ಸಂಜೆ ಪಟ್ಟಣದಲ್ಲಿ ಸದ್ದು ಮಾಡಿದ್ದ ಪೆಟ್ರೋಲ್ ಎರಚಿ ಬೆಂಕಿ ಹಚ್ಚಲಾಗಿದೆ ಎನ್ನುವ ಪ್ರಕರಣ ಭಾರಿ ತಿರುವು ಪಡೆದುಕೊಂಡಿದ್ದು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಒಟ್ಟು ಎರಡು ಎಫ್-ಆಯ್‌ಆರ್‌ಗಳು ದಾಖಲಾಗಿವೆ.

ಪ್ರಕರಣ ಹಿಂದೆ ಪ್ರೇಮ ಪಯಣ ಇರೋದಾಗಿ ಗಾಯಾಳುವಿನ ತಂದೆ ರಾಮನಗೌಡ ಸ್ಪಷ್ಟಪಡಿದ್ದಾರೆ. ಈ ಕುರಿತು ಮಾಧ್ಯಮದವರಿಗೆ ಚಿತ್ರೀಕರಿಸಿದ ವಿಡಿಯೋ ನೀಡಿರುವ ಅವರು, ನನ್ನ ಮಗ ಮತ್ತು ಮದರಿ ಕುಟುಂಬದ ಐಶ್ವರ್ಯ ಎಂಬ ಹುಡುಗಿ ಇಬ್ಬರೂ ಕಳೆದ ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದರು. ಕಳೆದ ವರ್ಷ ನಾನೇ ಅವರ ತಂದೆಗೆ ಹೇಳಿ ನಿಮ್ಮ ಮಗಳಿಗೆ ಬುದ್ಧಿವಾದ ಹೇಳಿ ಎಂದು ಹೇಳಿದ್ದೆ. ಆ ಹುಡುಗಿ ಬಿಡದೇ ಬೇರೆಯವರ ಕಡೆಯಿಂದ ತಮ್ಮ ಮನೆಗೆ ನನ್ನ ಮಗನನ್ನು ಕರೆಸುತ್ತಿದ್ದಳು. ಘಟನೆಯ ದಿನವೂ ಮನೆಯವರೆಲ್ಲರೂ ಹೊಂಚು ಹಾಕಿ ಮದುವೆ ಮಾಡಿಸುವದಾಗಿ ಹೇಳಿ ಮನೆಗೆ ಒಬ್ಬನನ್ನೇ ಕರೆಯಿಸಿ ರಾಡ್‌ನಿಂದ ಹಲ್ಲೆ ಮಾಡಿ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಕು-ರಿತು ಮುತ್ತಣ್ಣ ಮದರಿ, ಸೀಮಾ ಮದರಿ, ಅಪ್ಪು ಮದರಿ, ನೀಲಕಂಠ ಹರನಾಳ, ಐಶ್ವರ್ಯಾ ಮದರಿ, ಕಿರಣ ಮದರಿ ಹೀಗೆ 6 ಜನರ ಮೇಲೆ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.

ಇನ್ನೂ ಹುಡುಗಿಯ ತಂದೆ ಅಪ್ಪು ಮಾಧ್ಯಮಕ್ಕೆ ಮಾಹಿತಿ ನೀಡಿ ಕಳೆದ ಕೆಲವು ವರ್ಷಗಳಿಂದ ನನ್ನ ಮಗಳ ಹಿಂದೆ ರಾಹುಲ ಎನ್ನುವ ಹುಡುಗ ಬಿದ್ದಿದ್ದು ಪ್ರೇಮಿಸುವಂತೆ ಒತ್ತಾಯಿಸುತ್ತಿದ್ದ. ಆಕೆ ಪ್ರೇಮಕ್ಕೆ ಒಪ್ಪದಿದ್ದಾಗ ಆಕೆಯನ್ನು ಕೊಲೆ ಮಾಡುವದಾಗಿ ಬೆದರಿಕೆ ಹಾಕಿದ್ದ. ಕಳೆದ ಕೆಲ ದಿನ

# ನನ್ನ ಸಂತೋಷ ನನ್ನ ಹಕ್ಕು

**ಉದಯರಶ್ಮಿ ದಿನಪತ್ರಿಕೆ**

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಅದೊಂದು ಪುಟ್ಟ ಸಭಾಂಗಣ. ಅಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿದ್ದರು. ತರಹೇವಾರಿ ಸೀರೆಗಳಲ್ಲಿ ಹಿರಿಯರು ಮಿಂಚುತ್ತಿದ್ದರೆ, ತರುಣಿಯರು ನವೀನ ಮಾದರಿಯ ಬಟ್ಟೆಗಳನ್ನು ಧರಿಸಿ, ಪುಟ್ಟ ಮಕ್ಕಳು ಬಣ್ಣ ಬಣ್ಣದ ಫ್ರಾಕುಗಳನ್ನು ಮ್ಯಾಕ್ಸಿಗಳನ್ನು ಧರಿಸಿ ಮಿಂಚುತ್ತಿದ್ದರು.

ತವಾಶೆಯ ಆಟಗಳು, ಸ್ಪರ್ಧೆಗಳು ನಡೆದು ಇನ್ನೇನು ವೇದಿಕೆ ಕಾರ್ಯಕ್ರಮ ಆರಂಭವಾಗಬೇಕು. ಮಿಲಿಟರಿ ಕಮಾಂಡರ್ ಅವರ ಪತ್ನಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಅವರನ್ನು ಪರಿಚಯಿಸುತ್ತಾ ಕಾರ್ಯಕ್ರಮದ ನಿರೂಪಕಿ ಆಕೆಯ ಪತಿಯನ್ನು ಕೂಡ ಹೊಗಳುತ್ತಾ ಶ್ರೀಮತಿ ಉಷಾ ಅವರನ್ನು ಅವರ ಪತಿ ಸಂತೋಷವಾಗಿ ಇಟ್ಟಿದ್ದಾರೆ ಎಂದು ಹೇಳಿದರು.

ಇದೀಗ ಮಾತನಾಡುವ ಸರದಿ ಶ್ರೀಮತಿ ಉಷಾ ಅವರದು... ಸಭೆಯಲ್ಲಿ ಹಾಜರಿರುವ ಎಲ್ಲರನ್ನೂ ಅಭಿನಂದಿಸುತ್ತಾ ಕಾರ್ಯಕ್ರಮವನ್ನು ಕುರಿತು ಒಂದೆರಡು ನಿಮಿಷ ಮಾತನಾಡಿದ ಆಕೆ ಕೊನೆಯಲ್ಲಿ ಹೇಳಿದ್ದು ಇಷ್ಟು.... ನನ್ನನ್ನು ನನ್ನ ಪತಿ ಸಂತೋಷವಾಗಿ ಇರಿಸಿದ್ದಾರೆ ಎಂಬುದು ಸುಳ್ಳು.



ಸಂತೋಷವಾಗಿ ಇರಲೇಬೇಕು ಎಂಬುದು ನನ್ನ ಆಯ್ಕೆಯಾಗಿತ್ತು. ನನಗೆ ನಾನು ಎಂದು ಮೋಸ ಮಾಡಿಕೊಳ್ಳಬಾರದು, ನನಗಿರುವುದು ಒಂದೇ ಜೀವನ, ಸಾಧ್ಯವಾದಷ್ಟು ಅದನ್ನು ಸಂತೋಷಕರವಾಗಿ ಸುಖಕರವಾಗಿ ಕಳೆಯಬೇಕು ಎಂಬುದು ನನ್ನ ಮಹದಾಸೆಯಾಗಿ-ತ್ತು. ಗೃಹಿಣಿಯಾಗಿ ಇರುವುದು ಕೂಡ ನನ್ನದೇ ಆಯ್ಕೆಯಾಗಿತ್ತು. ನನ್ನ ಪತಿ ನನಗೆ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಲು ನನ್ನನ್ನು ಬಿಡ್ತಾರಾ ಎಂಬ ನಿಮ್ಮ ಪ್ರಶ್ನೆಗೆ ಉತ್ತರ "ನಾನೇನು ಹಸುವಲ್ಲ ಕಟ್ಟಿ ಹಾಕಲು ಎಂಬುದು". ಕಟ್ಟಿ ಹಾಕಿದ್ದರೆ ತಾನೇ ಬಿಟ್ಟು ಬಿಡುವ ಪ್ರಶ್ನೆ ಬರುವುದು.

ನನ್ನ ಕುಟುಂಬದ ಪ್ರತಿ ಆಗುಹೋಗುಗಳಿಗೂ ಸ್ಪಂದಿಸುತ್ತಾ ನನ್ನ ಮನೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಪತಿ ಮತ್ತು ಮಕ್ಕಳ ಬೇಕು ಬೇಡಗಳಿಗೆ ಕಿವಿಯಾಗುವ ನಾನು, ನನ್ನ ಮನದ ಮಾತಿಗೆ ಕಿವಿಯಾಗಲಾರೆನೇ?


ಹೌದು ನಾನು ಸ್ವತಂತ್ರ ವ್ಯಕ್ತಿ. ನನ್ನನ್ನು ಪ್ರೀತಿಸುವವರಿಗೆ ನನ್ನೆಲ್ಲವನ್ನು ಕೊಡುವುದರ ಜೊತೆ ಜೊತೆಗೆ ನನ್ನನ್ನು ನಾನು ಕೂಡ ಹೆಚ್ಚು ಪ್ರೀತಿಸಿಕೊಳ್ಳುತ್ತೇನೆ... ಅಂತೆಯೇ ನನಗಾಗಿ ನಾನು ಸಮಯವನ್ನು ಮೀಸಲಿರಿಸಿಕೊಳ್ಳುತ್ತೇನೆ. ಮನೆ ಕೆಲಸ ಮತ್ತು ವೈಯುಕ್ತಿಕ ಆಸಕ್ತಿಯ ನಡುವಣ ರೇಖೆ ನನಗೆ ಗೊತ್ತಿದೆ.

ನನ್ನ ವೈಯುಕ್ತಿಕ ಆಸೆ ಆಕಾಂಕ್ಷೆಗಳನ್ನು, ಕರ್ತವ್ಯಗಳನ್ನು ನಾನು ಈಡೇರಿಸದಿದ್ದರೆ ಬೇರೆ ಯಾರು ಪೂರೈಸುತ್ತಾರೆ. ನನ್ನತನವನ್ನು ಒತ್ತೆ ಇಟ್ಟು ಮತ್ತೊಬ್ಬರ ಚಾಕರಿ ಮಾಡಲಾರೆ. ನನಗಿರುವುದು ಒಂದೇ ಜೀವನ... ಮನೆ, ಮಕ್ಕಳು, ಗಂಡ ಸಂಬಂಧಗಳು ಎಂದು ಸಾಮಾನ್ಯವಾಗಿ ಜೀವನ ನಡೆಸುತ್ತಿರುವ ನಾನು ನನಗಾಗಿಯೂ



ಬದುಕುತ್ತೇನೆ. ಅವರೆಲ್ಲರ ಹಿತದಲ್ಲಿ ನನ್ನ ಹಿತವಿದೆ ನಿಜ ಆದರೆ ನನ್ನ ಬೇಕು ಬೇಡಗಳ ಅರಿವು ಅವ-ರಿಗಿಲ್ಲ ಎಂದಾದರೆ ಅವರಿಗೆ ಅದರ ಅರಿವು ಮೂಡಿಸಲು ನಾನೆಂದೂ ಹಿಂಜರಿಯುವುದಿಲ್ಲ.

ನನ್ನ ಸುಖ ಸಂತೋಷಗಳಿಗೆ ನನ್ನ ಕುಟುಂಬ ಜವಾಬ್ದಾರರಲ್ಲ.... ನಮ್ಮೆಲ್ಲಾ ಸುಖ ಸಂತೋಷಗಳಿಗೆ ಕೇವಲ ನಾವು ಮಾತ್ರ ಜವಾಬ್ದಾರರು. ನಾವು ಸಂತೋಷವಾಗಿದ್ದರೆ ಮಾತ್ರ ನಮ್ಮ ಸುತ್ತಮುತ್ತಲಿರುವವರನ್ನು ಸಂತೋಷವಾಗಿ ಇಡಲು ಸಾಧ್ಯ ಎಂಬ ಸತ್ಯವನ್ನು ಅರಿತುಕೊಳ್ಳಿ. ಬೇರೆಯವರಿಂದ ಅತಿ ಕಡಿಮೆ ನಿರೀಕ್ಷೆ



ಮಾಡಿ ಆದರೆ ವೈಯುಕ್ತಿಕವಾಗಿ ನಿಮಗೆ ನೀವು ಹೆಚ್ಚು ಸಮಯ ಕೊಡಿ.

ಈ ಬದುಕು ಎಲ್ಲರಿಗೂ ಕೊಡುವುದು ಕೇವಲ ಒಂದು ಅವಕಾಶವನ್ನು ಮಾತ್ರ.. ನಿಮ್ಮೆಲ್ಲಾ ಸಮಯವನ್ನು ನಿಮ್ಮ ಗಂಡನಿಗೆ, ಮಕ್ಕಳಿಗೆ ಕುಟುಂಬಕ್ಕೆ ಎಂದು ಮೀಸಲಿಡುವುದು ತಪ್ಪಲ್ಲ ಆದರೆ ನಿಮಗಾಗಿ ಸ್ವಲ್ಪವೂ ಸಮಯವನ್ನು ಇಟ್ಟುಕೊಳ್ಳುವುದಿಲ್ಲ ಎಂದರೆ ನೀವು ಬದುಕಿರುವ ಸಾರ್ಥಕತೆ ಏನು?

ನಿಮ್ಮ ಇಷ್ಟಾನಿಷ್ಟಗಳನ್ನು ನೀವು ಅರಿತುಕೊಳ್ಳದೆ ಬೇರೆಯವರು ಅರಿತುಕೊಳ್ಳಲಿ ಎಂಬ ಆಸೆ ಖಂಡಿತ ಬೇಡ. ಬೇರೆಯವರಿಗೆ ಇಷ್ಟವಾಗುವ ರೀತಿಯಲ್ಲಿ ಉಡುಗೆ ತೊಡುಗೆ ತೊಡುವ, ಅಡುಗೆ ಮಾಡಿ ಹಾಕುವ ನೀವು ನಿಮ್ಮ ವೈಯುಕ್ತಿಕ ಕಾಳಜಿ ಕೂಡ ಮಾಡಿಕೊಳ್ಳಿ.. ಅಂದಾಗ ಮಾತ್ರ ಜೀವಿತದ ಕೊನೆಗಾಲದಲ್ಲಿ "ಅಯ್ಯೋ!! ಎಲ್ಲರಿಗೂ ನಾನು ಮಾಡಿದೆ, ನನ್ನನ್ನು ಕೇಳುವವರೇ ಇಲ್ಲ" ಎಂದು ಹಲುಬದಿರಲು ಇಂದಿನಿಂದಲೇ ನಿಮ್ಮನ್ನು ನೀವು ಒಬ್ಬ ವಿಶೇಷ ವ್ಯಕ್ತಿಯಾಗಿ ಭಾವಿಸಿ ಪ್ರೀತಿಸಿ ಆರಾಧಿಸಿ ಎಂದು ಹೇಳಿ ಮಾತು ಮುಗಿಸಿದರು.

ಕೆಲ ಹೆಣ್ಣು ಮಕ್ಕಳ ಕಣ್ಣಂಚಲ್ಲಿ ತುಸು ತೇವ ಇದ್ದರೆ, ಮತ್ತೆ ಕೆಲ ಹೆಣ್ಣು ಮಕ್ಕಳು ಭಾವುಕರಾಗಿದ್ದರು. ಬದುಕಿನ ಕುರಿತ ಹೊಸ ಭಾವ ಒಂದು ಅಲ್ಲಿ ಸ್ಫುರಿಸಿತ್ತು. ಅದಕ್ಕೆ ಕಾರಣೀಭೂತರಾದ ಉಷಾ ಅವರ ಭಾಷಣಕ್ಕೆ ಪ್ರತಿಯಾಗಿ ಅದ್ಭುತವಾದ ಕರತಾಡನದ ಪ್ರತಿಕ್ರಿಯೆಯ ಧ್ವನಿ ಸಭಾಂಗಣವನ್ನು ತುಂಬಿತ್ತು.

# ಬಿದ್ದರೂ ಬಿದ್ದಿರದೆ ಎದ್ದು ಮುನ್ನಡೆದ ಸೋಯಿಚಿರೋ ಹೋಂಡಾ

ಉದಯರಶ್ಮಿ ದಿನಪತ್ರಿಕೆ

‘ಬೆಂಕಿಯುಲಿ ಅರಳಿದ ಹೂವು’ ಎಂಬ ಚಲನಚಿತ್ರದಲ್ಲಿ ಕಷ್ಟಗಳು ನೋವುಗಳು ಅದೆಷ್ಟೇ ಬಂದರೂ ಸೋಲನ್ನೊಪ್ಪಿಕೊಳ್ಳದೇ ಧೈರ್ಯದಿಂದ ಮುಂದಕ್ಕೆ ಸಾಗಿದಾಗ ಸುಖ ಸಂತೋಷಗಳು ದೊರೆಯುತ್ತವೆ ಎಂಬ ಸಂದೇಶವನ್ನು ನೀಡಿದ್ದಾರೆ. ಕಷ್ಟಗಳಿದ್ದಾಗಲೇ ಸಾಧನೆಯ ಹಸಿವು ಹೆಚ್ಚಿ ಯಶಸ್ಸನ್ನೂ ಗಳಿಸಿಕೊಳ್ಳುತ್ತಾನೆ. ಧನಾತ್ಮಕವಾಗಿ ಯೋಚಿಸುವ ವ್ಯಕ್ತಿಯು ಹತ್ತು ಬಾರಿ ಸೋತರೂ ಹನ್ನೊಂದನೆಯ ಬಾರಿ ಮತ್ತೆ ಎದ್ದು ನಿಂತು ಗೆಲ್ಲಲು ಪ್ರಯತ್ನಿಸುತ್ತಾನೆ. ಋಣಾತ್ಮಕ ಧೋರಣೆಯ ವ್ಯಕ್ತಿಯು ಒಂದೆರಡು ಬಾರಿ ಪ್ರಯತ್ನಿಸಿ ಸೋಲನ್ನು ಒಪ್ಪಿಕೊಂಡು ಬಿಡುತ್ತಾನೆ.

ಅಟೋಮೊಬೈಲ್ ಕ್ಷೇತ್ರದಲ್ಲಿ ವಿಶ್ವವಿಖ್ಯಾತಿಯನ್ನು ಪಡೆದಿರುವ ಹೋಂಡಾ ಕಂಪನಿಯ ಸಂಸ್ಥಾಪಕ ಸೋಯಿಚಿರೋ ಹೋಂಡಾ ತನ್ನದೇ ಆದ ಅಟೋಮೊಬೈಲ್ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಲು ಪಟ್ಟ ಶ್ರಮವನ್ನು ಊಹಿಸಲೂ ಸಾಧ್ಯವಿಲ್ಲ. ನೋವುಗಳ ನಂತರವೇ ಸುಖವಿರುವುದು ಎನ್ನುವುದಕ್ಕೆ ಇವರೇ ಉತ್ತಮ ಉದಾಹರಣೆ.

– ಸಂತೋಷ್ ರಾವ್ ಪೆರ್ಮುಡ,
ಪೆರ್ಮುಡ ಮನೆ, ಪಟ್ರಮೆ ಗ್ರಾಮ
ಮತ್ತು ಅಂಚೆ ಬೆಳ್ತಂಗಡಿ ತಾಲೂಕು,





ಸುಯಿಚಿರೋ ಹೋಂಡಾ ಹುಟ್ಟಿದ್ದು ಜಪಾನ್ ದೇಶದಲ್ಲಿ. ಬಡತನದಿಂದ ಕೂಡಿದ ಕೆಳ ಮಧ್ಯಮ ವರ್ಗದಲ್ಲಿ ಇವರು ಜನಿಸುತ್ತಾರೆ. ದಿನದಲ್ಲಿ ಎರಡು ಹೊತ್ತಿನ ಊಟವಷ್ಟೇ ಇವರಿಗಿದ್ದ ಆಸ್ತಿ. ತನ್ನ ಸಣ್ಣ ವಯಸ್ಸಿನಲ್ಲೇ ತಾನು ಜಗತ್ತೇ ಗುರುತಿಸುವಂತಹ ಸಾಧನೆ ಮಾಡಬೇಕೆಂಬ ಅದಮ್ಯ ಹಂಬಲವಿತ್ತು. ಸಣ್ಣ ವಯಸ್ಸಿನಿಂದಲೇ ಯಂತ್ರಗಳೆಂದರೆ ಅದೇನೋ ಆಸಕ್ತಿ ಈತನಿಗೆ. ಇದಕ್ಕಾಗಿ ತನ್ನ 20ನೇ ವಯಸ್ಸಿನಲ್ಲೇ ಇಂಜಿನಿಯರಿಂಗ್ ಕಾಲೇಜು ಸೇರುತ್ತಾರೆ. ಅಲ್ಲಿ ತನಗೆ ಹೊಳೆದಿದ್ದು ವಾಸನಗಳ ಇಂಜಿನ್ ಒಳಗಿರುವ ಪಿಸ್ಟನ್ ರಿಂಗ್ ತಯಾರಿಸುವ ಯೋಚನೆ. ಅದಕ್ಕಾಗಿ ತನ್ನ ಕಾಲೇಜಿನ ಲ್ಯಾಬ್’ನಲ್ಲಿ ರಾತ್ರಿ ಹಗಲು ಶ್ರಮವಹಿಸಿ ಕೆಲಸ ಮಾಡಲಾರಂಭಿಸಿದ. ಅದೆಷ್ಟೋ ಬಾರಿ ಲ್ಯಾಬ್ ಒಳಗಡೆಯೇ ನಿದ್ರಿಸಿದ್ದೂ ಇದೆ. ತಾನು ಮುಂದೊಂದು ದಿನ ಅತ್ಯುತ್ತಮವಾದ ಪಿಸ್ಟನ್ ರಿಂಗ್ ತಯಾರಿಸಿ ಪ್ರಖ್ಯಾತ ಟೊಯೋಟಾ ಕಂಪೆನಿಗೆ ಪೂರೈಕೆದಾರನಾಗಬೇಕು ಎಂಬ ಆಶಯ ಈತನದ್ದು. ಈ ಸಮಯಕ್ಕೆ ಹೋಂಡಾಗೆ ಮದುವೆಯೂ ಆಗಿತ್ತು. ಪಿಸ್ಟನ್ ತಯಾರಿಗೆ ಬಂಡವಾಳದ ಕೊರತೆಯಾದಾಗ ಹೆಂಡತಿಯ ಚಿನ್ನವನ್ನೇ ಒತ್ತಯಿಟ್ಟಿದ್ದನೆಂದರೆ ಈತನ ಛಲದ ಅರಿವಾಗುತ್ತದೆ.

ಅಂತಿಮವಾಗಿ ತನ್ನ ಕನಸಿನ ಪಿಸ್ಟನ್ ರಿಂಗ್ ಮಾದರಿಯನ್ನು ತಯಾರಿಸಿ, ಟೊಯೋಟಾ ಕಂಪೆನಿ ತನ್ನ ರಿಂಗ್’ಗಳನ್ನು ಖರೀದಿಸುತ್ತದೆ ಎಂಬ ಭಾವನೆಯೊಂದಿಗೆ ಟೊಯೋಟಾ ಕಂಪೆನಿಯ ಕದ ಬಡಿಯುತ್ತಾರೆ. ಆದರೆ ತನ್ನ ಗುಣಮಟ್ಟವೇ ಬೇರೆ ಎಂದು ಖರೀದಿಸಲು ಟೊಯೋಟಾ ನಿರಾಕ–ರಿಸುತ್ತದೆ. ಹೋಂಡಾ ವಾಪಾಸು ಲ್ಯಾಬ್‌ಗೆ ಬಂದಾಗ ಸಹಪಾಠಿಗಳು ಗೇಲಿಮಾಡಿದರು. ‘ನಗುವವರು ನಗುತ್ತಿರಿ, ನಾನು ಪ್ರಯತ್ನಿಸುವೆ’ ಎಂದು ಗುಣಮಟ್ಟ ಹೊಸ ವಿನ್ಯಾಸ ತಯಾರಿಸಲಾರಂಭಿಸಿದ. ಎರಡು ವರ್ಷಗಳ ಪರಿಶ್ರಮದ ನಂತರ ಹೊಸ ವಿನ್ಯಾಸದೊಂದಿಗೆ ಮತ್ತೆ ಟೊಯೋಟಾ ಕಂಪೆನಿಯ ಕದ ತಟ್ಟುತ್ತಾರೆ. ಈತನ ಹೊಸ ವಿನ್ಯಾಸದಿಂದ ಖುಷಿಗೊಂಡ ಟೊಯೋಟಾ ಈತನ ಪಿಸ್ಟನ್ ರಿಂಗ್ ತಯಾರಿಕಾ ಕಾರ್ಖಾನೆ ತೆರೆಯಲು ಹಣಕಾಸಿನ ನೆರವು ನೀಡಿತು. ಟೋಯೋಟಾದಾ ಪ್ರೋತ್ಸಾಹದಿಂದ ಉತ್ಸಾಹದಿಂದ ಹೋಂಡಾ ಕಾರ್ಖಾನೆ ಪ್ರಾರಂಭವಾಯಿತು.

ಇದೇ ವೇಳೆಗೆ ಜಪಾನ್‌ನ ವಿವಿದ್‌ಡ್ ಅಪ್ಪಳಿಸಿದ ಭೂಕಂಪದಿಂದಾಗಿ ಹೋಂಡಾನ ಕನಸಿನ ಕಾರ್ಖಾನೆ ಧರೆಗುರುಳಿತು. ತನ್ನ ತಂಡ ಕಣ್ಣೀರಿಟ್ಟಾಗ ಮಂದಹಾಸದಿಂದ ‘ಆದದ್ದಾಯಿತು, ಮತ್ತೆ ಕಟ್ಟೋಣ ಬನ್ನಿ’ ಎಂದ.



ಎರಡನೇ ಬಾರಿ ಕಾರ್ಖಾನೆ ನಿರ್ಮಾಣ ಸಾಗಿದ್ದಾಗಲೇ ಜಪಾನ್ ಎರಡನೇ ವಿಶ್ವಯುದ್ಧ ಪ್ರವೇಶಿಸಿ ದೇಶಾದ್ಯಂತ ಸಿಮೆಂಟ್ ಪೂರೈಕೆ ನಿಂತಿತು. ಏನು ಮಾಡುವುದೆಂದು ಯೋಚಿಸುತ್ತಲೇ ‘ಸಿಮೆಂಟ್ ಸಿಗುತ್ತಿಲ್ಲ ಎಂದರೆ, ನಾವೇ ಸಿಮೆಂಟ್ ತಯಾರಿಸೋಣ’ ಎಂದು ಈತನ ತಂಡ ಸಿಮೆಂಟ್ ತಯಾ–ರಿಸುವ ಹೊಸ ತಂತ್ರಜ್ಞಾನವನ್ನೇ ಕಂಡುಹಿಡಿಯಿತು. ಈ ಮೂಲಕ ತನ್ನ ಕಾರ್ಖಾನೆಯ ಕೆಲಸವನ್ನು ಪೂರ್ಣಗೊಳಿಸಿತು. ಆದರೆ ಅಮೆರಿಕನ್ ವಾಯುಪಡೆಗಳು ಜಪಾನ್ ಮೇಲ್ ನಡೆಸಿದ ವಾಯು ಧಾಳಿಯಲ್ಲಿ ಈತನ ಕಾರ್ಖಾನೆ ಧ್ವಂಸಗೊಂಡಿತು. ಆಗ ಜಪಾನ್‌ನಲ್ಲಿ ಸ್ಟೀಲ್ ಕೊರತೆಯಾದರೂ ಹೋಂಡಾ ಕೈಚೆಲ್ಲಿ ಕುಳಿತುಕೊಳ್ಳಲಿಲ್ಲ.

ಯುದ್ಧ ಸಂದರ್ಭ ಅಮೆ–ರಿಕದ ಯುದ್ಧ ವಿಮಾನಗಳು ಇಂಧನದ ಟ್ಯಾಂಕ್‌ಗಳನ್ನು ಹೊತ್ತು ಹಾರುತ್ತಿದ್ದರಿಂದ ಟ್ಯಾಂಕ್‌ಗಳಲ್ಲಿದ್ದ ಇಂಧನವನ್ನು ಬಳಸಿದ ನಂತರ, ಟ್ಯಾಂಕ್‌ಗಳನ್ನು ಆಗಸದಿಂದ ತೆಳಕ್ಕೆ ಹಾಕುತ್ತಿದ್ದವು (ವಿಮಾನದ ಭಾರ ಕಡಿಮೆಯಾಗಲಿ ಎಂದು). ಹೀಗೆ ಯುದ್ಧ ವಿಮಾನಗಳು ಜಪಾನ್ನ ಪೂರ್ತಿ ಸ್ಟೀಲ್ ಟ್ಯಾಂಕ್‌ಗಳನ್ನು ಎಸೆದಿದ್ದವು. ಹೋಂಡಾ ಅವುಗಳನ್ನೆಲ್ಲ ಸಂಗ್ರಹಿಸಿ, ಕರಗಿಸಿ ತನ್ನ ಕಾರ್ಖಾನೆ ನಿರ್ಮಾಣಕ್ಕೆ ಬಳಸಿ, ಈ ಸ್ಟೀಲ್ ಟ್ಯಾಂಕ್‌ಗಳು ‘ಅಮೆರಿಕದ ಅಧ್ಯಕ್ಷ ಟ್ರೂಮನ್‌ರ ಕೊಡುಗೆ’ ಎಂದು ಹೋಂಡಾ ಹೇಳಿದ.

ಈತನ ಸಮಸ್ಯೆ ಇಷ್ಟಕ್ಕೇ ನಿಲ್ಲದೇ, ಯುದ್ಧಾನಂತರ ಜಪಾನ್‌ನಲ್ಲಿ ತೀವ್ರ ಇಂಧನದ ಅಭಾವ ಉಂಟಾಯಿತು. ದೇಶದಲ್ಲಿ ಇಂಧನವಿಲ್ಲವಾದ ಮೇಲೆ ಕಾರುಗಳನ್ನೂ ಕೊಳ್ಳುವವರಿಲ್ಲದಾಗಿ ಟೊಯೋಟಾ ಕಂಪನಿ ಕಾರ್ ಉತ್ಪಾದನೆಯನ್ನು ನಿಲ್ಲಿಸಿತು. ಇದರಿಂದಾಗಿ ಹೋಂಡಾನ ಪಿಸ್ಟನ್ ರಿಂಗ್ಗಳಿಗೆ ಬೇಡಿಕೆಯೂ ಇಲ್ಲವಾಯಿತು. ದೇಶದಲ್ಲಿದ್ದ ತೀವ್ರ ಇಂಧನದ ಕೊರತೆಯ ಕಾರಣದಿಂದ ಜನರು ಕಾಲ್ನಡಿಗೆ ಮತ್ತು ಸೈಕಲ್‌ಗಳ ಮೂಲಕ ಓಡಾಟ ನಡೆಸುತ್ತಿದ್ದರು.

ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ ಹೋಂಡಾಗೆ, ಸೈಕಲ್‌ಗೆ ಚಿಕ್ಕದಾದ ಇಂಜಿನ್ ಕೂರಿಸಿದರೆ ಅದು ಹೆಚ್ಚು ಇಂಧನವನ್ನು ಕುಡಿಯದು ಎನ್ನುವ ಐಡಿಯಾ ಬಂತು. ತಕ್ಷಣವೇ ಆ ಐಡಿಯಾವನ್ನು ಹೋಂಡಾ ಕಾರ್ಯ ರೂಪಕ್ಕೂ ತಂದರು. ಹೋಂಡಾ ಮತ್ತು ಅವರ ತಂಡ ಬೈಕ್ ಇಂಜಿನ್ ತಯಾರಿಸಿತು. ಕೆಲವೇ ವರ್ಷಗಳಲ್ಲಿ ಹೋಂಡಾ ಕಂಪನಿಯ ಬೈಕ್ ಇಂಜಿನ್‌ಗಳು ಎಷ್ಟು ಪ್ರಖ್ಯಾತವಾದವು ಎಂದರೆ, ಅವುಗಳನ್ನು ಯೂರೋಪ್ ಮತ್ತು ಅಮೆರಿಕಕ್ಕೂ ರಫ್ತು ಮಾಡಲಾಯಿತು. ಇದರ ನಂತರದ್ದು ಎಲ್ಲವೂ ಇತಿಹಾಸ, 1970ರ ವೇಳೆಗೆ ಹೋಂಡಾ ಕಂಪೆನಿ ಚಿಕ್ಕ ಕಾರುಗಳ ಉತ್ಪಾದನೆಯನ್ನು ಆರಂಭಿಸಿತು. ಈತನ ಬೈಕ್‌ಗಳಷ್ಟೇ ಅಲ್ಲದೇ, ಕಾರುಗಳೂ ಜಗತ್ಪ್ರಸಿದ್ಧವಾದವು.

ಸೋಯಿಚಿರೋ ಹೋಂಡಾ ಜಾಗದಲ್ಲಿ ನಾವಿದ್ದಿದ್ದರೆ ಏನು ಮಾಡುತ್ತಿದ್ದೆವು ಎಂದು ನಾವೆಲ್ಲರೂ ಯೋಚಿಸಬೇಕಿದೆ. ಟೊಯೋಟಾ ಕಂಪನಿಯು ಹೋಂಡಾನ ಪಿಸ್ಟನ್ ರಿಂಗ್ ಡಿಸೈನ್‌ನ್ನು ನಿರಾಕರಿಸಿದಾಗ, ಕಾರ್ಖಾನೆಯು ಕುಸಿದುಬಿದ್ದಾಗ ಮತ್ತು ಸತತ ಸೋಲುಗಳು ಬಂದೊದಗಿದರೂ ಸೋಲುಗಳಿಗೆ ಜಗ್ಗದೇ ಯಶಸ್ಸಿನೆಡೆಗೆ ಸಾಗಿದ ಛಲಗಾರಿಕೆಯು ಎಲ್ಲರಿಗೂ ಮಾದರಿ. ಸೋಲಾಯಿತು ಎಂದು ಹಣೆಬರಹವನ್ನು ಹಳಿದು ಕೈ ಚೆಲ್ಲುತ್ತಿವ ಜಾಯಮಾನಕ್ಕೆ ಕಟ್ಟು ಬಿದ್ದಿದ್ದರೆ ವಿಶ್ವವಿಖ್ಯಾತ ಹೋಂಡಾ ಕಂಪೆನಿ ಹೊರಬರಲು ಸಾಧ್ಯವೇ ಇರಲಿಲ್ಲ. ಅದಕ್ಕೇ ಹೇಳುವುದು, ಜೀವನವೇ ಮುಗಿದು ಹೋಯಿತು ಎನ್ನುವಂತಹ ಸೋಲಾಗಬೇಕು, ಅದೇ ಸೋಲಿನಿಂದ ಪಾಠ ಕಲಿತು ಅದೇ ಸ್ಥಳದಲ್ಲಿ ಗೆದ್ದು ಬೀಗಬೇಕೆಂದು.




# ಸರಕಾರಿ ಉಪಕರಣಗಾರ ತರಬೇತಿ ಕೇಂದ್ರ: ಡಿಪ್ಲೋಮಾ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್

ವಿಜಯಪುರ: ಸರಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ 2024–25ನೇ ಸಾಲಿನ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಡಿಪಲೋಮಾ ಇನ್ ಟೂಲ್& ಡೈ ಮೆಕ್ಯಾನಿಕ್ ಇಂಜಿನಿಯರಿಂಗ್, ಡಿಪ್ಲೋಮಾ ಮೆಕಟ್ರಾನಿಕ್ಸ್ ಇಂಜಿನಿಯ–ರಿಂಗ್, ಡಿಪ್ಲೋಮಾ ಎಲೆಕ್ಟ್ರಾನಿಕ್ಸ್ ▯▯▯ಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿ ಪಡೆಯಬಹುದಾಗಿದೆ. ಆಸಕ್ತ ಅರ್ಹವಿದ್ಯಾರ್ಥಿಗಳು ಪ್ರವೇಶಾತಿಯ ಅರ್ಜಿಗಾಗಿ ಕೆಇಎ ವೆಬ್‌ಸೈಟ್ ನಲ್ಲಿರುವ ಅರ್ಜಿಯನ್ನು ಭರ್ತಿ ಮಾಡಿ ಜೂನ್ 3 ರೊಳಗಾಗಿ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಕೂಡಲಸಂಗಮಕ್ಕೆ ಭೇಟಿ ನೀಡಿ ಅರ್ಜಿಯನ್ನು ಭರ್ತಿಮಾಡಿ ಸಂಬಂಧಿಸಿದ ಪ್ರಮಾಣಪತ್ರಗಳೊಂದಿಗೆ ಪ್ರವೇಶ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಸರಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ ಕಾರ್ಯಾಲಯ, ಮತ್ತು ದೂರವಾಣಿ ಸಂಖ್ಯೆ: 9902556110, 7411811916ಕ್ಕೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಶುಪಾಲರಾದ ಸುರೇಶ ರಾಥೋಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಂಡಗೂಳಿ: ರಥೋತ್ಸವ ನೆರವೇರಿಸಿದ ಮಹಿಳೆಯರು

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಕೊಂಡಗೂಳಿ ಗ್ರಾಮದ ಶ್ರೀಸದ್ಗುರು ಸಮರ್ಥ ಚಂದ್ರಶೇಖರ ಶಿವಯೋಗಿಗಳ ಹಾಗೂ ಶ್ರೀಶಾಂತಾನಂದ ಸ್ವಾಮಿಗಳ ಪುಣ್ಯಸ್ಮರಣೋತ್ಸವ ಅಂಗವಾಗಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ತಾಲ್ಲೂಕಿನ ಕೊಂಡಗೂಳಿ ಗ್ರಾಮದ ಸಿದ್ಧಾರೂಢಮಠದ ಶಾಂತಾಶ್ರಮದ ಆವರಣದಲ್ಲಿ ಭಾನುವಾರ ಶಿವಯೋಗಿಗಳು ಹಾಗೂ ಸ್ವಾಮೀ–ಜಿಯವರ ಪುಣ್ಯಸ್ಮರಣೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಗಳು ದಿನಪೂರ್ತಿ ಜರುಗಿದವು.



ಬೆಳಿಗ್ಗೆ 10 ಗಂಟೆಗೆ ಆರಂಭಗೊಂಡ ಪಲ್ಲಕ್ಕಿಉತ್ಸವ ಗ್ರಾಮದ ವಿವಿಧ ಬೀದಿಗಳಲ್ಲಿ ಸಂಚರಿಸಿ ಮಧ್ಯಾನ ಆಶ್ರಮ ತಲುಪಿತು. ನಂತರ ಪೂಜ್ಯರ ಆಶ್ವಾರೂಢ ರಥ ಮೆರವಣಿಗೆ ಜರುಗಿ–ತು. ಈ ಸಂದರ್ಭದಲ್ಲಿ ಕುಂಭ, ಕಳಶ ಹೊತ್ತ ಮಹಿಳೆಯರು ತಮ್ಮ ಭಕ್ತಿ ಭಾವ ಮೆರೆದರು. ಗೊಂಬೆಕುಣಿತ, ಡೊಳ್ಳು ಕುಣಿತ ಸಹಿತ ವಿವಿಧ ವಾಧ್ಯವೃಂದಗಳು ಜನರ ಗಮನ ಸೆಳೆದವು. ಸಾಯಂಕಾಲ ಶಿವಯೋಗಿಗಳ ಜನ್ಮಸ್ಥಳ ಗೋಟ–ಖಂಡಕಿ ಗ್ರಾಮದಿಂದ ಕಳಶ ಆಗಮನ ಆಗುವುದರ ಮೂಲಕ ರಥೋತ್ಸವ ಆರಂಭಗೊಂಡಿತು. ತಳಿರು ತೋರಣ, ಬಾವುಟಗಳಿಂದ ಸಿಂಗಾರಗೊಂಡ ರಥವನ್ನು ಅಧಿಕವಾಗಿ ಮಹಿಳೆಯರೇ ಎಳೆದು ತಮ್ಮ ಭಕ್ತಿ ಸಮರ್ಪಿಸಿದರು.

ರಥೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ 10 ದಿನಗಳ ಕಾಲ ಚಿಕ್ಕರೂಗಿಯ ಈರಣ್ಣಶಾಸ್ತ್ರಿ ಅವರಿಂದ ಆಧ್ಯಾತ್ಮೀಕ ಪ್ರವಚನ ಹಾಗೂ ಶನಿವಾರ ಸಾಯಂಕಾಲ ಮಹಾಂತಯ್ಯ ಹಿರೇಮಠ ಅವರಿಂದ ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮಗಳು ಜರುಗಿದವು.

ಮಾಗಣಗೇರಿ ಬ್ರಹನ್ಮಠದ ವಿಶ್ವರಾಧ್ಯಶ್ರೀಗಳು, ಕೊಂಡಗೂಳಿ, ಆಲೂರು, ಚಳಕಾಪುರ ಸಿದ್ಧಾರೂಢಮಠದ ಶಂಕರಾನಂದಶ್ರೀ, ಕಲಕೇರಿ ಗದ್ದಿಗೆಮಠದ ಗುರುಮಡಿವಾಳೇಶ್ವರಶ್ರೀ, ಪ್ರಶಾಂತದೇವರು, ಕೊಂಡಗೂಳಿ ಗದ್ದಿಗೆಮಠದ ಬಸಲಿಂಗಯ್ಯ ಸ್ವಾಮೀಜಿ, ಗೋಟಖಂಡಕಿಯ ಮಲ್ಲಯ್ಯಸ್ವಾಮೀಜಿ, ಕೊಂಡಗೂಳಿ ಹಿರೇಮಠದ ಬಸಲಿಂಗಯ್ಯ ಸ್ವಾಮೀಜಿ ಸೇರಿದಂತೆ ಹಲವು ಪೂಜ್ಯರು ಹಾಗೂ ಗೋಟಖಂಡಕಿಯು ಸಚ್ಚಿದಾನಂದಮಠದ ಚನ್ನಬಸವಶರಣರು, ಬಸವರಾಜ ಮಾಗಣಗೇರಿ ಉಪಸ್ಥಿತರಿದ್ದರು.

# ಉಚಿತ ವಿದ್ಯಾರ್ಥಿ ಬಸ್ ಪಾಸ್ ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್


ವಿಜಯಪುರ: 2024–25ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗಾಗಿ ಉಚಿತ/ರಿಯಾಯತಿ ಬಸ್ ಪಾಸ್ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸೇವಾಸಿಂಧು ತಂತ್ರಾಂಶದ ಮೂಲಕ ವಿದ್ಯಾರ್ಥಿಗಳು ಕೆ–1 ಸೆಂಟರ್ ಹಾಗೂ ಗ್ರಾಮ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹದಾಗಿದೆ ಎಂದು ವಿಜಯಪುರ ವಿಭಾಗದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾ–ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೂನ್ 4 ಶುಷ್ಕ ದಿನ ಘೋಷಿಸಿ ಡಿಸಿ ಆದೇಶ

ಉದಯರಶ್ಮಿ ನ್ಯೂಸ್

ವಿಜಯಪುರ: ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಮತ ಎಣಿಕೆಯು ಜೂನ್ 4ರಂದು ನಗರದ ಸೈನಿಕ ಶಾಲೆಯಲ್ಲಿ ನಡೆಯಲಿದ್ದು, ಮತ ಎಣಿಕೆ ಕಾರ್ಯವನ್ನು ಶಾಂತಿ ಹಾಗೂ ಸುವ್ಯವಸ್ಥೆಯಿಂದ ನಡೆಸಲು ಅನೂಕೂಲವಾಗಲು ಹಾಗೂ ಯಾವುದೇ ಅಹಿತಕರ ಘಟನೆಗಳು ಜರಗದಂತೆ ನೋಡಿಕೊಳ್ಳಲು ಪ್ರಜಾಪ್ರತಿನಿಧಿ ಕಾಯ್ದೆ 1951ರ ಕಲಂ 135 ಸಿ ಅಡಿಯಲ್ಲಿ ಜೂ. 4 ರಂದು ಬೆಳಗ್ಗೆ 6 ರಿಂದ ಜೂನ್ 5 ರ ಬೆಳಗಿನ 6 ಗಂಟೆಯವರೆಗೂ ಜಿಲ್ಲೆಯಾದ್ಯಂತ ಮದ್ಯ ಮಾರಾಟ, ಸಾಗಾಣಿಗೆ ಹಾಗೂ ಸಂಗ್ರಹವನ್ನು ನಿಷೇಧಿಸಿ “ಶುಷ್ಕ ದಿನ” ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ.ಭೂಬಾಲನ್ ಆದೇಶ ಹೊರಡಿಸಿದ್ದಾರೆ.

# ಕನ್ನಡ ಚಿತ್ರರಂಗ ದುಸ್ಥಿತಿಯಲ್ಲಿ..



ಪ್ರಬುದ್ಧ ಮನಸ್ಸು ಸಮಾಜ

ವಿವೇಕಾನಂದ ಎಚ್. ಕೆ.

ಉದಯರಶ್ಮಿ ದಿನಪತ್ರಿಕೆ

ಕೆಲವೇ ಕೆಲವು ನಟನಟಿಯರು, ನಿರ್ಮಾಪಕರು, ಪ್ರದರ್ಶಕರು ಮಾತ್ರವೇ ದೊಡ್ಡ ಮಟ್ಟದ ಯಶಸ್ಸು ಕಂಡು ಹಣ ಮಾಡುತ್ತಿದ್ದಾರೆ. ಬಹುತೇಕ ಶೇಕಡಾ 90% ಕ್ಕಿಂತ ಹೆಚ್ಚು ಆ ಕ್ಷೇತ್ರದ ಅವಲಂಬಿತರು ನಷ್ಟದಲ್ಲಿದ್ದಾರೆ ಅಥವಾ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇದು ಹೀಗೆಯೇ ಮುಂದುವರೆದರೆ ಚಿತ್ರರಂಗ ಅವಸಾನದ ಅಂಚಿಗೆ ಬಂದು ತಲುಪುತ್ತದೆ. ಆದ–್ದರಿಂದ ಏನಾದರೂ ಕ್ರಮ ಕೈಗೊಳ್ಳಲೇಬೇಕು..

ಮುಖ್ಯವಾಗಿ ಪ್ರಖ್ಯಾತ ನಟರು ಹೆಚ್ಚು ಹೆಚ್ಚು ಸಿನಿಮಾ ಮಾಡಬೇಕು. ಏಕೆಂದರೆ ಅವ–ರಿಂದ ಒಂದಷ್ಟು ಪ್ರೇಕ್ಷಕರು ಚಿತ್ರಮಂದಿರಗಳತ್ತ ಬರಬಹುದು ಎಂಬ ನಿರೀಕ್ಷೆ. ಹಾಗೆಯೇ ಬಿ ಮತ್ತು ಸಿ ದರ್ಜೆಯ ಚಿತ್ರಮಂದಿರಗಳು ಬಹುತೇಕ ಮುಚ್ಚುವ ಹಂತದಲ್ಲಿವೆ ಅಥವಾ ಮುಚ್ಚಿವೆ. ಈಗ ದಾರಿ ಕಾಣದಾಗಿದೆ ಎಂಬ ಚರ್ಚೆಗಳು ಕನ್ನಡ ಚಿತ್ರರಂಗದಲ್ಲಿ ನಡೆಯುತ್ತಿದೆ..

ಯಾವಾಗಲೂ ಒಂದು ಕ್ಷೇತ್ರ ಆರ್ಥಿಕ ಸಂಕಷ್ಟ ಎದುರಾದಾಗ ಆ ಕ್ಷೇತ್ರದ ಜನ ಅಷ್ಟಕ್ಕೇ ಸೀಮಿತವಾಗಿ ಒಂದಷ್ಟು ಕ್ರಮಗಳನ್ನು ಕೈಗೊಳ್ಳುತ್ತಾರೆ. ಇದು ಸಾಮಾನ್ಯ ಪ್ರಕ್ರಿಯೆ. ಆದ–’ರೆ ಜಾಗತೀಕರಣದ ನಂತರ ಈ ರೀತಿಯ ಅನೇಕ ಕ್ಷೇತ್ರಗಳು ಸಾಕಷ್ಟು ದೊಡ್ಡ ಪಲ್ಲಟಗಳಿಗೆ ಕಾರಣವಾಗಿ ಅದು ಸಂಪೂರ್ಣ ಕುಸಿದು, ಆ ಪ್ರಕ್ರಿಯೆಯಲ್ಲಿ ಅನೇಕರು ನಷ್ಟ ಅನುಭವಿಸಿ ಆ ಕ್ಷೇತ್ರವನ್ನೇ ಬಿಟ್ಟು ಹೋಗಿರುವುದಲ್ಲದೆ ಇನ್ನೂ ಕೆಲವರು ಆತ್ಮಹತ್ಯೆಯನ್ನೇ ಮಾಡಿಕೊಂಡಿದ್ದಾರೆ..

ಇದ’ು ಸಮಗ್ರ ಚಿಂತನೆಗೆ ಒಳಪಡಬೇಕಾದ ವಿಷಯು. ಕೃಷಿ ಕ್ಷೇತ್ರವೇ ಇರಲಿ, ರೇಷ್ಮೆ ಉದ್ಯಮವೇ ಇರಲಿ, ಶಿಕ್ಷಣ ಆರೋಗ್ಯವೇ ಇರಲಿ,




ಮನರಂಜನಾ ಉದ್ಯಮವೇ ಇರಲಿ, ರಾಜಕೀಯವೇ ಇರಲಿ,, ಉದ್ಯಮ ವ್ಯಾಪಾರವೇ ಇರಲಿ, ಬೀದಿ ಬದಿಯ ಸಣ್ಣಪುಟ್ಟ ವ್ಯಾಪಾರಿಗಳೇ ಇರಲಿ, ಚಿಲ್ಲರೆ ಅಂಗಡಿಗಳವರೇ ಆಗಿರಲಿ ದೊಡ್ಡ ವ್ಯಕ್ತಿಗಳು, ದೊಡ್ಡ ಸಂಸ್ಥೆಗಳು ಅಂದರೆ ಕಾರ್ಪೋರೇಟ್ ಸಂಸ್ಕೃತಿ ಯಾವುದೇ ಕ್ಷೇತ್ರಕ್ಕೆ ಪ್ರವೇಶಿಸಿದ ನಂತರ ಅದು ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚಿ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಎಲ್ಲರನ್ನು ತನ್ನೊಳಗಡೆ ಬಂಧಿಸಿ, ಅವರನ್ನು ನಾಶಪಡಿಸಿ ತಾನೇ ಏಕೀಕೃತ ಮತ್ತು ಕೇಂದ್ರೀಕೃತ ಆರ್ಥಿಕ ಬಲಶಾಲಿಯಾಗುವುದು ಸಾಮಾನ್ಯ ದೃಶ್ಯವಾಗಿದೆ..

ಇದನ್ನು ಎಲ್ಲಾ ಕ್ಷೇತ್ರಗಳಲ್ಲೂ ನೀವು ಗಮನಿಸಬಹುದು. ಸಣ್ಣಪುಟ್ಟ ಆಸ್ಪತ್ರೆಗಳು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಾಗಿ ಅದು ಮತ್ತೆ ಬೃಹತ್ ಉದ್ಯಮಿಯ ಕೈಗೆ ಹೋಗಿ ಆ ಜಾಲ ದೇಶಾದ್ಯಂತ ವ್ಯಾಪಿಸುತ್ತದೆ. ದಿನನಿತ್ಯದ ಸರಕು ಸರಂಜಾಮುಗಳ ವ್ಯಾಪಾರವು ಮಾಲ್ ಸಂಸ್ಕೃತಿ, ಬಿಗ್ ಬಜಾರ್ ಸಂಸ್ಕೃತಿಗೆ ಒಳಪಟ್ಟು ಚಿಕ್ಕ ಪುಟ್ಟ ಅಂಗಡಿಗಳು ಬದುಕುವುದೇ ದುಸ್ತರವಾಗಿದೆ..

ಹಾಗೆಯೇ ಮನರಂಜನಾ ಉದ್ಯಮವು ಸಹ ಕೆಲವೇ ಕೆಲವು ಹಿತಾಸಕ್ತಿಗಳು, ಜನಪ್ರಿಯರು ಮಾತ್ರವೇ ಚಿತ್ರರಂಗ ಎಂದು ಪರಿಗಣಿಸುವ ಮಟ್ಟಕ್ಕೆ ಬೆಳೆದಿರುತ್ತದೆ. ಬಣ್ಣದ ಲೋಕದ ಮನರಂಜನಾ ಉದ್ಯಮ ಈಗ ಅನುಭವಿಸುತ್ತಿರುವ ಸಂಕಷ್ಟಗಳು ಈ ದೇಶದ ಅನೇಕ ಮಧ್ಯಮ, ಕೆಳಮಧ್ಯಮ ವರ್ಗದ ಜನ ಕಳೆದ 20/30 ವರ್ಷಗಳಿಂದ ಅನುಭವಿಸುತ್ತಾ ಇದ್ದಾರೆ. ಇದು ಹೊಸದೇನು ಅಲ್ಲ. ನಮ್ಮ ಕಣ್ಣ ಮುಂದೆಯೇ ಅನೇಕ ಸಿರಿವಂತ ಕುಟುಂಬಗಳು ಕೆಳಕ್ಕೆ ಜಾರಿವೆ. ಹಾಗೆಯೇ ಅನಿರೀಕ್ಷಿತವಾಗಿ ಕೆಲವು ಕುಟುಂಬಗಳು ದೊಡ್ಡ ಹಂತಕ್ಕೆ ಬೆಳೆದೂ ಸಹ ಇವೆ..

ಕೆಜಿಎಫ್, ಬಾಹುಬಲಿಯಂತ ಸಿನಿಮಾ 1500 ಕೋಟಿ ಅಥವಾ ಕಾಂತಾರದಂತಹ ಸಿನಿಮಾ 700 ಕೋಟಿ ಹಣ ಮಾಡುತ್ತಿರುವಾಗ ಚಿತ್ರರಂಗ ದುಸ್ಥಿತಿಗೆ ಬರಲು ಹೇಗೆ ಸಾಧ್ಯ ಎಂದು ಜನಸಾಮಾನ್ಯರಿಗೆ ಅನ್ನಿಸಬಹುದು. ನಾವು ಕೇವಲ ಯಶಸ್ಸುಗಳನ್ನು, ಪ್ರಚಾರ ಪಡೆದ ಸಿನಿಮಾಗಳನ್ನು ಮಾತ್ರ ಗಮನಿಸಬಾರದು. ದೊಡ್ಡ ಮೊತ್ತ ಕೇವಲ ಒಂದು ಎರಡಕ್ಕೇ ಸೀಮಿತವಾಗಿರುತ್ತದೆ. ಆದ–’ರೆ ಕನ್ನಡ ಚಿತ್ರರಂಗದಲ್ಲಿ ಸಾಮಾನ್ಯವಾಗಿ ಸರಿಸುಮಾರು ವರ್ಷಕ್ಕೆ 100/130/180 ಚಿತ್ರಗಳು ನಿರ್ಮಾಣವಾಗಿ ಬಿಡುಗಡೆಯಾಗುತ್ತವೆ. ಅದನ್ನೂ ಗಮನಿಸಬೇಕು..

ಒಬ್ಬ ನಾಯಕನಟ 100 ಕೋಟಿ, 50 ಕೋಟಿಯ ಸಂಭಾವನೆ ಪಡೆದರೆ ಅದು ಆತನಿಗೆ ಮಾತ್ರ ಸೀಮಿತವಾಗಿರುತ್ತದೆ. ಅದೇ ಮಾನದಂಡವನ್ನು ಎಲ್ಲ ಕಡೆ ಉಪಯೋಗಿಸಲು ಸಾಧ್ಯವಿಲ್ಲ. ಇಡೀ ವ್ಯವಸ್ಥೆ ಎಚ್ಚೆತ್ತುಕೊಂಡು ಸುಸ್ಥಿರ ಅಭಿವೃದ್ಧಿಯ ಕಡೆ, ಸಮಾನ ಹಂಚಿಕೆಯ ಕಡೆ, ಸಮಾನ ಹಕ್ಕು ಮತ್ತು ಕರ್ತವ್ಯಗಳ ಕಡೆ ಮುನ್ನುಗ್ಗದಿದ್ದರೆ ಈ ರೀತಿಯ ಏರಿಳಿತಗಳಿಗೆ ಎಲ್ಲ ಕ್ಷೇತ್ರಗಳ ಮಧ್ಯಮ ಮತ್ತು ಕೆಳ ಮಧ್ಯಮ ಹಾಗೂ ಬಡ ಕುಟುಂಬಗಳು ಬಲಿಯಾಗುತ್ತವೆ ಎಂಬುದನ್ನು ಪ್ರತಿಯೊಬ್ಬರು ಅರಿಯಬೇಕಿದೆ. ಇಲ್ಲದಿದ್ದರೆ ಇವತ್ತು ಚಿತ್ರರಂಗ, ನಾಳೆ ರಿಯಲ್ ಎಸ್ಟೇಟ್, ನಾಡಿದ್ದು ಮತ್ತೊಂದು ಉದ್ಯಮ ಹೀಗೆ ಕೆಲವೇ ಜನರ ನಿಯಂತ್ರಿತ ವ್ಯವಸ್ಥೆ ನಮ್ಮನ್ನು ಗುಲಾಮರನ್ನಾಗಿ ಮಾಡುವುದು ನಿಶ್ಚಿತ..




ಜಿಡಿಪಿ ಬೆಳವಣಿಗೆಯ ಅಂಕಿ ಅಂಶಗಳು ಅಥವಾ ಬೃಹತ್ ಗಾತ್ರದ ಆರ್ಥಿಕತೆ, ಈ ಎರಡನ್ನೇ ನಾವು ಅಭಿವೃದ್ಧಿಯ ಮಾನದಂಡ ಎಂದು ಪರಿಗಣಿಸಬಾರದು. ಸಮಗ್ರ – ಸುಸ್ಥಿರ ಅಭಿವೃದ್ಧಿ ಬಹಳ ಮುಖ್ಯವಾಗುತ್ತದೆ. ದೇಶದ ಪ್ರತಿ ಪ್ರಜೆಯ ಈ ಕ್ಷಣದ ಆತನ ಜೀವನ ಮಟ್ಟ ಮತ್ತು ನೆಮ್ಮದಿಯ ಗುಣಮಟ್ಟ ಬಹಳ ಮುಖ್ಯವಾಗಬೇಕು..

ಶಾರುಖಾನ್ ಕೇವಲ ನಟ ಮಾತ್ರ ಅಲ್ಲ ನಿರ್ಮಾಪಕನೂ ಹೌದು, ಐಪಿಎಲ್ ಮುಂತಾದ ಕ್ರೀಡಾ ತಂಡಗಳ ಮಾಲೀಕನೂ ಸಹ ಹೌದು, ಜಾಹೀರಾತು, ಇವೆಂಟ್ ಮ್ಯಾನೇಜ್ಮೆಂಟ್ ಉದ್ಯಮ ದೊರೆಯೂ ಹೌದು. ಹಾಗೆಯೇ ಅಂಬಾನಿ, ಅದಾನಿಗಳು ತಮ್ಮ ವ್ಯಾಪಾರ ಕ್ಷೇತ್ರಗಳನ್ನು ಮೀರಿ ಕ್ರೀಡೆ, ಮಾಧ್ಯಮ ಕ್ಷೇತ್ರಗಳನ್ನು ತಮ್ಮ ವ್ಯಾಪಾರದ ಬಲೆಯೊಳಗೆ ಸೇರಿಸಿಕೊಳ್ಳುತ್ತಿದ್ದಾರೆ. ಮೇಲ್ನೋಟಕ್ಕೆ ಅಭಿವೃದ್ಧಿ ಮತ್ತು ಸ್ಪರ್ಧೆ ಎನಿಸಬಹುದು. ಆದರೆ ಇಡೀ ಆರ್ಥಿಕ, ಸಾಮಾಜಿಕ ಮತ್ತು ರಾಜ–ಕೀಯ ಗುಲಾಮಿತನಕ್ಕೆ ಇದು ಕಾರಣವಾಗುತ್ತದೆ ಎಂಬ ಸೂಕ್ಷ್ಮವನ್ನು ಸಂವೇದನಾಶೀಲ ಮನಸ್ಸುಗಳು ಗ್ರಹಿಸಬೇಕು..

ಈ ದುಸ್ಥಿತಿಗಳು ದಿಢೀರ್ ಎಂದು ಆಗುವುದಿಲ್ಲ. ಇದು ಕ್ಯಾನ್ಸರ್ ಕಣಗಳಂತೆ ನಿಧಾನವಾಗಿ, ಒಳಗೊಳಗೆ ಜೀವ ತಳೆಯುತ್ತಿರುತ್ತವೆ. ಒಂದು ದಿನ ಅದರ ದುಷ್ಪರಿಣಾಮಗಳು ಗೋಚರವಾಗತೊಡಗಿದಾಗ ಅದರ ಅರಿವಾಗುತ್ತದೆ. ಅದು ಯಾವ ಹಂತಕ್ಕೆ ಬಂದಮೇಲೆ ನಮ್ಮ ಅರಿವಿಗೆ ಬರುತ್ತದೆ ಎಂಬುದರ ಮೇಲೆ ಮುಂದಿನ ಪರಿಣಾಮಗಳು ಅವಲಂಬಿಸಿರುತ್ತದೆ..

ಸಿನಿಮಾ ಮಂದಿಗೆ ಈಗ ಅರ್ಥವಾಗುತ್ತಿದೆ. ಕಾಲ ಮಿಂಚಿದೆ. ಅನೇಕ ಪರ್ಯಾಯ ಮಾಧ್ಯಮಗಳು ಬೆಳವಣಿಗೆ ಹೊಂದಿವೆ. ಆದರೂ ಒಂದಷ್ಟು ಪರಿಹಾರ ಸೂತ್ರಗಳು ಇದ್ದೇ ಇರುತ್ತವೆ. ಅದನ್ನು ಎಲ್ಲರ ಸಹಕಾರದೊಂದಿಗೆ



ಕಂಡುಕೊಳ್ಳಲೇಬೇಕಿದೆ. ಪ್ರಖ್ಯಾತ ನಟರು ತಮ್ಮ ಹಮ್ಮು ಬಿಮ್ಮು ಮರೆತು ಅಜ್ಞಾನ ಮೆರೆಯದೆ ಇದಕ್ಕೆ ಸಹಕರಿಸಬೇಕಿದೆ. ಅನುಭವಿಗಳು ಪರಿಹಾರ ಸೂತ್ರ ಹಣಿಯಬೇಕಿದೆ..

ನಮ್ಮ ಬಾಲ್ಯದ, ಯೌವ್ವನದ, ಸಂಕಷ್ಟದ ಸಮಯದಲ್ಲಿ ಈ ಸಿನಿಮಾಗಳು ನಮ್ಮ ಮೇಲೆ ಒಂದಷ್ಟು ಪರಿಣಾಮ ಬೀರಿದೆ. ಒಂದು ಇಡೀ ಜನಾಂಗವೇ ಸಿನಿಮಾಗಳ ಭ್ರಮಾ ಲೋಕದಲ್ಲಿ ತೇಲಿದೆ ಮತ್ತು ಮುಳುಗಿದೆ. ಸಿನಿಮಾ ನಟರು ನಮ್ಮದೇ ಬದುಕಿನ ಭಾಗವಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅವರು ಸಾಕಷ್ಟು ಕೆಟ್ಟ ಮೌಲ್ಯಗಳ ಪ್ರತಿಪಾದಕರಾಗಿದ್ದರು, ಚಿತ್ರರಂಗ ಮೌಲ್ಯಯುತವಾಗಿ, ಪ್ರಾಮಾಣಿಕವಾಗಿ, ಸುಸ್ಥಿರವಾಗಿ ಉಳಿಯಲಿ ಮತ್ತು ಬೆಳೆಯಲಿ ಎಂದು ಹಾರೈಸುತ್ತ..



# ಸಾವರ್ಕರ್ ಜಯಂತಿ ಆಚರಣೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಸ್ವಾತಂತ್ರ್ಯ ವೀರ ಸಾವರ್ಕರ 141

ನೇ ಜಯಂತಿ ಅಂಗವಾಗಿ ಮಂಥನ ವಿಜಯಪುರ ಚಿಂತಕರ ಚಾವಡಿಯ ವತಿಯಿಂದ ವೀರ್ ಸಾವರ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಂಥನ ಸದಸ್ಯರಾದ ಶ್ರೀಧರ ಪಾರಶೆಟ್ಟಿ, ಬಸವರಾಜ ದಂಡೋತಿ, ಚನ್ನಬಸು ಕೋರಿ, ಶ್ರೀಮತಿ ಮನಿಷಾ ಕುಲಕರ್ಣಿ, ರಘೂತ್ತಮ ಅರ್ಜುಣಗಿ, ಶ್ರೀರಂಗ ಪುರಾಣಿಕ ಇನ್ನಿತರರು ಉಪಸ್ಥಿತರಿದ್ದರು..

# ಶಿಥಿಲ ಕೊಠಡಿಯಲ್ಲೇ ಮಕ್ಕಳಿಗೆ ವಿದ್ಯಾರ್ಜನೆ । ಮಕ್ಕಳನ್ನು ಶಾಲೆಗೆ ಸೇರಿಸಲು ಪಾಲಕರ ಹಿಂದೇಟು

# ಕುಸಿಯುವ ಹಂತದಲ್ಲಿರುವ ಚಿಮ್ಮಡ ಸರಕಾರಿ ಉರ್ದು ಶಾಲೆ

**ಉದಯರಶ್ಮಿ ನ್ಯೂಸ್**

**- ಇಲಾಹಿ ಇ. ಜಮಖಂಡಿ**

ಚಿಮ್ಮಡ: ಗ್ರಾಮದ ಸರಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯ ಎರಡೂ ಕೋಣೆಗಳ ಛಾವಣಿ ಶಿಥಿಲಗೊಂಡು ಕುಸಿಯುವ ಹಂತದಲ್ಲಿದ್ದರೂ ಮಕ್ಕಳು ಪ್ರತಿದಿನ ಅನಿವಾರ್ಯವಾಗಿ ಇಂತಹ ಕಟ್ಟಡದಲ್ಲಿಯೇ ವಿದ್ಯಾರ್ಜನೆ ಮಾಡುವ ಸ್ಥಿತಿ ನಿರ್ಮಾಣಗೊಂಡಿದ್ದು ಮಕ್ಕಳನ್ನು ಶಾಲೆಗ ಕಳುಹಿಸಲು ಪಾಲಕರು ಹಿಂದೇಟು ಹಾಕುತಿದ್ದಾರೆ.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಿರ್ಮಿಸಲಾಗಿರುವ ಈ ಕಟ್ಟಡಗಳು ಸಂಪೂರ್ಣ ಶಿಥಿಲಗೊಂಡಿದ್ದು ಗೋಡೆಗಳು ಬಿರುಕುಗೊಂಡಿವೆ, ಪಿಲ್ಲರ್ ಗಳಂತೂ ಸಿಮೆಂಟೆಲ್ಲ ಉದುರಿ ಅಸ್ತಿಪಂಜರದಂತಾಗಿವೆ ಇಂತಹ ಶಾಲೆಗಳಲ್ಲಿ ಮಕ್ಕಳು ವಿದ್ಯಾರ್ಜನೆ ಮಾಡುವುದಾದರೂ ಹೇಗೆ? ಎಂದು ಪಾಲಕರು ಪ್ರಶ್ನಿಸುತಿದ್ದಾರೆ.

ಈ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಹಲವಾರು ಬಾರಿ ಲಿಖಿತವಾಗಿ, ಮೌಖಿಕವಾಗಿ ಮನವಿ ಮಾಡಿದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಕೈ ಮುಗಿದು ಒಳಗೆ ಬರಬೇಕಾದಂತಹ ಜ್ಞಾನದೇಗುಲಗಳು ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ ದೋರಣೆಯಿಂದ ಜೀವ ಕೈಯ್ಯಲ್ಲಿ ಹಿಡಿದು ಒಳಗೆ ಬರುವ ಸ್ಥಿತಿ ನಿರ್ಮಾಣಗೊಂಡಿದೆ.

ವಿಚಿತ್ರವೆಂದರೆ ಈ ಶಿಥಿಲ ಶಾಲಾ ಕಟ್ಟಡಗಳ ಹಿಂಬದಿಯಲ್ಲಿಯೇ



ಕಳೆದ ಹದಿನೈದು ವರ್ಷಗಳ ಹಿಂದೆ ಉರ್ದು ಶಾಲೆಗಾಗಿ ಎರಡು ಹಾಗೂ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಗಾಗಿ ಎರಡು ಒಟ್ಟು ನಾಲ್ಕು ಕೊಠಡಿಗಳನ್ನು ನಿರ್ಮಿಸಲಾಗಿದೆ, ಆದರೆ ಕಳಪೆ ದರ್ಜೆಯ ಕಿಟಕಿ ಬಾಗಿಲುಗಳನ್ನು ಆ ಕಟ್ಟಡಗಳಿಗೆ ಅಳವಡಿಸಿದ್ದ-ರಿಂದಾಗಿ ಹಾಗೂ ಅವೈಜ್ಞಾನಿಕ ರೀತಿಯಲ್ಲಿ ಕೆರೆಗೆ ಹೊಂದಿಕೊಂಡು ಅವುಗಳನ್ನು ನಿರ್ಮಾಣ ಮಾಡಿದ್ದ-ರಿಂದ ಮಳೆಗಾಲದಲ್ಲಿ ಕೆರೆಯ ನೀರು ಕಟ್ಟಡಗಳಲ್ಲಿ ಬಸಿದು ಕೆರೆದಂಡೆಯ ಎರಡೂ ಕೋಣೆಗಳಲ್ಲಿ ನೀರು ಜಿನುತ್ತದೇ ಅಲ್ಲದೇ ಕೆರೆಯ ದಂಡೆಯ ಮೇಲೆ ಸಾರ್ವಜನಿಕರು ಬಯಲು ಬಹಿರ್ದೆಸೆಗೆ ಹೋಗುವುದರಿಂದ ದುರ್ವಾಸನೆ ಬರುವುದೆಂಬ ಕಾರಣದಿಂದ ಆ ಭಾಗದ ನಾಲ್ಕೂ ಕೋಣೆಗಳನ್ನು ನಿರ್ಮಾಣಗೊಳಿಸಿದಾಗಿನಿಂದ ಇದುವರೆಗೂ ತರಗತಿಗಳಿಗೆ



ಬಳಸಲಾಗಿಲ್ಲ, ಈಗ ಆ ನಾಲ್ಕೂ ಕೊಠಡಿಗಳು ಅನೈತಿಕ ಚಟುವಟಿಗಳ ತಾಣವಾಗಿದ್ದು ಕಿಡಿಗೇಡಿಗಳು ಆ ಕಟ್ಟಡಗಳಲ್ಲಿ ಕುಡಿತ, ಇಸ್ಪಿಟ್, ಹಾಗೂ ಅಕ್ರಮ ಚಟುವಟಿಕೆಗಳ ತಾಣವಾಗಿಸಿದ್ದಾರೆ.

ಶಿಕ್ಷಣ ಹಾಗೂ ಅಭಿವೃದ್ದಿಗಾಗಿ ಕೋಟ್ಯಾಂತರ ಅನುದಾನ ನೀಡುವ ಸರಕಾರ ಅವುಗಳ ಸದ್ಬಳಕೆ ಮಾಡುವಲ್ಲಿ ವಿಫಲವಾಗುತ್ತಿವೆ. ಶಾಲೆಗಳ ಕುಂದು ಕೊರತೆ ನಿವಾರಣೆಗಾಗಿ, ಉಸ್ತುವಾರಿಗಾಗಿಯೇ ಸರಕಾರ ಹಲವು ಅಧಿಕಾರಿಗಳನ್ನು ನೇಮಕಗೊಳಿಸಿದ್ದರೂ ಈ ರೀತಿ ಅನುದಾನ ಪೋಲಾಗುತ್ತಿರುವುದು ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ಎಂಬಂತಾಗಿದೆ. ಹಿಂದಿನ ಚುನಾವಣೆಗಳಲ್ಲಿ ಗ್ರಾಮದ ಮೂರು ಮತ್ತು ನಾಲ್ಕನೇ ವಾರ್ಡಿನ ಮತಗಟ್ಟೆಗಳಾಗಿದ್ದ ಈ ಶಾಲಾ ಕೊಠಡಿಗಳು ಈ ಬಾರಿಯ ಲೋಕಸಭಾ ಚುನಾವಣೆಗಾಗಿ ಕಟ್ಟಡಗಳನ್ನು ಪರಿಶೀಲಿಸಿದ ಚುನಾವಣಾಧಿಕಾರಿಗಳು ಸದರೀ ಕಟ್ಟಡಗಳು ಕುಸಿಯುವ ಹಂತದಲ್ಲಿದ್ದು ಮತದಾನ ಪ್ರಕ್ರಿಯೆಗೆ ಬಳಸಲು ಯೋಗ್ಯವಾಗಿಲ್ಲ ಎಂಬ ಕಾರಣದಿಂದ ಈ ಎರಡೂ ಕೊಠಡಿಗಳಲ್ಲಿ ನಡೆಸಲಾಗುತಿದ್ದ ಮತದಾನ ಸ್ಥಳಿಯ ಸರಕಾರಿ ಹೆಣ್ಣು ಮಕ್ಕಳ ಶಾಲೆಗೆ ವರ್ಗಾಯಿಸಲಾಯಿತು. ವಿಪರ್ಯಾಸವೆಂದರೆ ಆ ಕೊಠಡಿಗಳಲ್ಲಿಯೇ ಈಗ ವಿದ್ಯಾರ್ಥಿಗಳು ಜ್ಞಾನಾರ್ಜನೆ ಪಡೆಯಬೇಕು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎಂದು ಹೇಳುವ ಅಧಿಕಾರಿಗಳು, ಜನಪ್ರತಿನಿಧಿಗಳು ಇವರತ್ತ ಕಣ್ಣು ಬಿಟ್ಟು ನೋಡದಿರುವುದು ದುರ್ದೈವ. ಸಂಬಂಧಿಸಿದ ಅಧಿಕಾರಿಗಳೂ ಈಗಲಾದರೂ ಈ ಕುರಿತು ಸೂಕ್ತ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ಪಾಲಕರು, ಎಸ್ಡಿಎಂಸಿ ಪದಾಧಿಕಾ-ರಿಗಳು ಆಗ್ರಹಿಸಿದ್ದಾರೆ.

> ಈ ಶಿಥಿಲ ಕಟ್ಟಡಗಳ ದುರಸ್ತಿಗಾಗಿ ಅಧಿಕಾರಿಗಳಿಗೆ ಹಲವಾರು ಬಾರಿ ಛಾಯಾಚಿತ್ರಗಳ ಸಮೇತ ಲಿಖಿತವಾಗಿ ಹಾಗೂ ಮೌಖಿಕವಾಗಿ ಹಲವಾರು ಬಾರಿ ಮನವಿ ಮಾಡಿದ್ದೇವಲ್ಲದೇ ಗ್ರಾಮಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಆಗಮಿಸಿದ ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಯವರನ್ನು ಶಾಲೆಗೆ ಖುದ್ದು ಕರಿಸಿ ಕೊಠಡಿಗಳ ನೈಜ ಸ್ಥಿತಿ ತೋರಿಸಿದ್ದು, ಈ ಕುರಿತು ಕೂಡಲೆ ಕ್ರಮ ಕೈಗೊಳ್ಳುವುದಾಗಿ ಹೇಳಿಹೋದ ಅಧಿಕಾ-ರಿಗಳು ನಂತರ ವರ್ಗಾವಣೆಗೊಂಡರು.”
>
> **– ಅಮೀರಲಿ ಸರಕಾವಸ, ಎಸ್ಡಿಎಂಸಿ ಅಧ್ಯಕ್ಷರು**

# ಅಕ್ರಮ ಅಕ್ಕಿ ಸಂಗ್ರಹದ ಮೇಲೆ ಆಹಾರ ನಿರೀಕ್ಷಕರ ದಾಳಿ



**ಉದಯರಶ್ಮಿ ನ್ಯೂಸ್**

ಇಂಡಿ: ಅಕ್ರಮವಾಗಿ ಅಕ್ಕಿ ಸಂಗ್ರಹಿಸಿದ ಅಡ್ಡೆಯ ಮೇಲೆ ಖಚಿತ ಮಾಹಿತಿ ಆಧರಿಸಿ ಆಹಾರ ನಿರೀಕ್ಷಕರ ಅಧಿಕಾರಿಗಳ ನೇತೃತ್ವದಲ್ಲಿ ಪೊಲೀಸರು ದಾಳಿಗೈದಿರುವ ಘಟನೆ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಶಿರಶ್ಯಾಡ ಗ್ರಾಮದಲ್ಲಿ ನಡೆದಿದೆ.

ಹಣಮಂತರಾಯಗೌಡ ಪಾಟೀಲ ಬಂಧಿತ ಆರೋಪಿ. ಇನ್ನು ಅಕ್ರಮವಾಗಿ ಶಿರಶ್ಯಾಡ ಗ್ರಾಮದಲ್ಲಿರುವ ಜಮೀನಿನಲ್ಲಿ ಅಕ್ರಮವಾಗಿ ಶೆಡ್‌ನಲ್ಲಿ ಪಡಿತರ ಅಕ್ಕಿಯಾದ ಅನ್ನಭಾಗ್ಯ ಅಕ್ಕಿ ಸಂಗ್ರಹಿಸಿದರು. ಅದಕ್ಕಾಗಿ ಪೊಲೀಸರು ದಾಳಿಗೈದು 1,89,290 ಮೌಲ್ಯದ 8230 ಕೆಜಿ ಅಕ್ಕಿಯನ್ನು ಜಪ್ತಿಗೈದಿದ್ದಾರೆ. ಅಲ್ಲದೇ, ವಾಹನ ಸಮೇತ ಅಕ್ಕಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಇಂಡಿ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಹಾರ ನಿರೀಕ್ಷಿಕ ಪರಮಾನಂದ ಹೂಗಾರ, ಗ್ರಾಮೀಣ ಪೋಲಿಸ್ ಠಾಣಾ ಪಿ ಎಸ್ ಐ ಮಂಜುನಾಥ ಹುಲಕುಂದ, ಎ ಎಸ್ ಐ ಪಿ.ಐ ಅರವತ್ತಿ, ಎಸ್ ಎಚ್ ನರೋಟಿ, ಎಸ್ ವೈ ಜೇರಟಗಿ, ಆರ್ ಗಡೇದ ಪೋಲಿಸ್ ಸಿಬ್ಬಂದಿ ಉಪಸ್ಥಿತರಿದ್ದರು.

# ಸಂಭ್ರಮದ ಮರಗಮ್ಮದೇವಿ ಜಾತ್ರಾಮಹೋತ್ಸವ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಮರಗಮ್ಮದೇವಿ ದೇವಸ್ಥಾನದ ಜಾತ್ರಾಮಹೋತ್ಸವ ಹಾಗೂ ಉಡಿ ತುಂಬುವ ಕಾರ್ಯಕ್ರಮ ಮಂಗಳವಾರ ಶ್ರದ್ಧಾ-ಭಕ್ತಿ, ಸಂಭ್ರಮದಿಂದ ಜರುಗಿತು. ಜಾತ್ರಾಮಹೋತ್ಸವದಂಗವಾಗಿ ಮರಗಮ್ಮದೇವಿಗೆ ಬೆಳಗ್ಗೆ ವಿಶೇಷ ಪೂಜೆ ಜರುಗಿತು. ಜನರು ಕುಟುಂಬ ಸಮೇತರಾಗಿ ಆಗಮಿಸಿ ದೇವಿ ದರ್ಶನ ಪಡೆದುಕೊಂಡು ಕಾಯಿ-ಕರ್ಪೂರ, ನೇವೈದ್ಯ ಅರ್ಪಿಸಿ ಧನ್ಯತಾಭಾವ ಅನುಭವಿಸಿದರು.

ಜಾತ್ರಾಮಹೋತ್ಸವದಂಗವಾಗಿ ಬೆಳಗ್ಗೆ ದೇವಸ್ಥಾನದಿಂದ ಪಲ್ಲಕ್ಕಿ ಹಾಗೂ ದೇವಸ್ಥಾನದ ಕಳಸವು ಬಸವೇಶ್ವರ ದೇವಸ್ಥಾನದ ಬಸವ ತೀರ್ಥ ಬಾವಿಗೆ ವಾದ್ಯಮೇಳದೊಂದಿಗೆ ಗಂಗಾಸ್ಥಳಕ್ಕೆ ತೆರಳಿತು. ಗಂಗಾಸ್ಥಳ ಪೂಜೆ ನಂತರ ಪಲ್ಲಕ್ಕಿ ಉತ್ಸವ ಹಾಗೂ ಕಳಸವು ಅದ್ದೂರಿ ಮೆರವಣಿಗೆ ಮೂಲಕ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ದೇವಸ್ಥಾನಕ್ಕೆ ಮರಳಿತು. ಮೆರವಣಿಗೆ ದೇವಸ್ಥಾನಕ್ಕೆ ಮರಳಿದ ನಂತರ ಕಳಸಾರೋಹಣ ನೆರವೇರಿಸಿ ಮರಗಮ್ಮದೇವಿಗೆ ಭಕ್ತರ ಸಮ್ಮುಖದಲ್ಲಿ ಉಡಿ ತುಂಬಿ ಉತ್ತಮ ಮಳೆ-ಬೆಳೆಗೆ, ಭಕ್ತರಿಗೆ ಸುಖ-ನೆಮ್ಮದಿ ನೀಡಲೆಂದು ಪ್ರಾರ್ಥನೆ ಸಲ್ಲಿಸಲಾಯಿತು. ಪಲ್ಲಕ್ಕಿ ಉತ್ಸವದ ಮೆರವಣಿಗೆಯಲ್ಲಿ ಸುತ್ತಟ್ಟಿಯ ಝಾಂಜಾ ಮೇಳ, ಬಸವನಬಾಗೇವಾಡಿಯ ಡೊಳ್ಳು ಮೇಳ, ಚಿಮ್ಮಲಗಿಯ ಕರಡಿ ಮಜಲು ಸೇರಿದಂತೆ ವಿವಿಧ ಜೋಗಮ್ಮರ ಕುಣಿತ ಮೆರಗು ತಂದಿತ್ತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

# ಡಿಪ್ಲೋಮಾ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

**ಉದಯ‘ರಶ್ಮಿ ನ್ಯೂಸ್**

ವಿಜಯಪುರ: 2024-25ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾಕ್ಕಾಗಿ ನಾಲ್ಕನೇ ಹಂತದ ಆಫ್‌ಲೈನ್ ಮೂಲಕ ಅರ್ಜಿಯನ್ನುಯ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆ ಪಾಸದ ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಮೇ.30ರ ಒಳಗಾಗಿ ಪ್ರವೇಶ ಬಯಸುವ ಸಂಸ್ಥೆಯ ಪ್ರಾಂಶುಪಾಲ-ರಂದು ಅರ್ಹ ಮೆರೆಟ್ ಪಟ್ಟಿ ತಯಾರಿಸಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಮೇ.30ರ ಮರ್ಧಯಾಃನ ನಂತರ ಆಫ್‌ಲೈನ್ ಕೌನ್ಸಿಂಗ್ ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಮೂಲ ದಾಖಲಾತಿಗಳನ್ನು ಹಾಗೂ ಪ್ರವೇಶ ಶುಲ್ಕಗಳನ್ನು ಪ್ರವೇಶಾತಿ ಪಡೆಯಬಹುದು ಎಂದು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ

ಉದಯರಶ್ಮಿ
ಪ್ರತಿ ಮನೆ-ಮನದ ಸಂಗಾತಿ

# ಇಂಡಿ: ಮೇ.29 ರಿಂದ 30ರವರೆಗೆ ವಿದ್ಯುತ್ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ವಿಜಯಪುರ: 110 ಕೆವಿ ಇಂಡಿ ವಿದ್ಯುತ್ ವಿತರಣ ಕೇಂದ್ರದಲ್ಲಿ ಪರಿವರ್ತಕದ ಆಯಿಲ್ ಸೋರುವಿಕೆ ತಡೆಗಟ್ಟುವ ಕಾಮಗಾರಿ ಕೈಗೊಂಡಿರುವುದರಿಂದ ಮೇ.29 ರಂದು ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಸದರಿ ವಿದ್ಯುತ್ ವಿತರಣ ಕೇಂದ್ರದಿದ ಸರಬರಾಜು ಆಗುವ 33ಕೆವಿ ತಾಂಬಾ ನಲ್ಲಿ ಮೇ.30ರಂದು ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ 33ಕೆವಿ ನಾದ, 33 ಕೆವಿ ತಡವಲಗಾ ವಿದ್ಯುತ್ ವಿತರಣಾ ಕೇಂದ್ರದ ಮಾರ್ಗಗಳ ಮೇಲೆ ಬರುವ ಎಲ್ಲಾ 11 ಕೆವಿ ಮಾರ್ಗಗಳಲ್ಲಿ ವಿದ್ಯತ್ ವ್ಯತ್ಯಯ ಉಂಟಾಗಲಿದೆ.

ಆದ ಕಾರಣ ನಾಗ-ರೀಕರು ಹಾಗೂ ಗ್ರಾಹಕರು ಸಹಕ-ರಿಸಬೇಕು ಎಂದು ಹೆಸ್ಕಾಂ ಇಂಡಿಯ ಕಾರ್ಯ ಮತ್ತು ಪಾಲನ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೈಲಾ ಅಂಗೀಕರಿಸಿಕೊಳ್ಳುವಂತೆ ವಕ್ಫ್ ಸಂಸ್ಥೆಗಳಿಗೆ ಸೂಚನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಣಿಯಾದ ವಿಜಯಪುರ ಜಿಲ್ಲೆಯ ಎಲ್ಲಾ ವಕ್ಫ್ ಸಂಸ್ಥೆಗಳು ಕರ್ನಾಟಕ ರಾಜು ಉಚ್ಚ ನ್ಯಾಯಾಲಯವು 2024 ಎ.23 ರಂದು ನೀಡಿರುವ ಆದೇಶದಂತೆ ರಾಜ್ಯ ವಕ್ಫ್ ಮಂಡಳಿಯ ಮಾದರಿ ನಿಯಮಾವಳಿ ನಮೂನೆ ನಂ-42(ಬೈಲಾ)ನ್ನು ಅಂಗೀಕರಿಸಿಕೊಳ್ಳುವುದು ಕಡ್ಡಾಯವಾಗಿದೆ. ಈವರೆಗೂ ಮಾದರಿ ನಿಯಮಾವಳಿಯನ್ನು ಪಾಲಿಸದ ವಕ್ಫ್ ಸಂಸ್ಥೆಗಳು ಮಾದರಿ ನಿಯಮಾವಳಿಯ ನಮೂನೆ ನಂ.42ನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ವಿಜಯಪುರದ ವಕ್ಫ್ ಕಚೇರಿಯ ಮೂಲಕ ರಾಜ್ಯ ವಕ್ಫ್ ಮಂಡಳಿಯ ಅಂಗೀಕಾರಕ್ಕಾಗಿ ಅತೀ ಶೀಘ್ರ ಸಲ್ಲಿಸಬೇಕು ಎಂದು ವಿಜಯಪುರದ ಜಿಲ್ಲಾ ವಕ್ಫ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# “ಅನುತ್ತೀರ್ಣರಾದ ಮಕ್ಕಳಿಗೆ ಭರವಸೆಯ ಅಗತ್ಯ”



## ಭಾವರಶ್ಮಿ



**-ಮಮತಾ**
(“ನಮ್ಮ ಕಥಾ ಅರಮನೆ” ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಪ್ರಸ್ತುತ ಕಾಲಘಟ್ಟದಲ್ಲಿ ಇಂತಹ ವಿಷಯದ ಮೇಲೆ ಸಾಮಾಜಿಕ ಅರಿವು ಮೂಡಿಸುವುದು ಅತ್ಯಗತ್ಯ. ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ, ಅಂಕಗಳು ಖಂಡಿತವಾಗಿ ಅನುಚಿತ ಮಹತ್ವವನ್ನು ಹೊಂದಿ, ಯಶಸ್ಸು ಮತ್ತು ವೈಫಲ್ಯದ ತಪ್ಪು ಗ್ರಹಿಕೆಗಳನ್ನು ರೂಪಿಸುತ್ತಿವೆ. ಶೈಕ್ಷಣಿಕ ಕಾರ್ಯಕ್ಷಮತೆ ಮಾತ್ರ ಒಬ್ಬ ವ್ಯಕ್ತಿಯನ್ನು ಎಂದಿಗೂ ವ್ಯಾಖ್ಯಾನಿಸುವುದಿಲ್ಲ... ಪರೀಕ್ಷೆಯಲ್ಲಿ ತೇರ್ಗಡೆಯಾಗಿದಾಕ್ಷಣ ವಿದ್ಯಾರ್ಥಿಯ ಬದುಕು ಸಫಲವಾಯಿತು ಎನ್ನುವುದು ಮಿಥ್ಯ... ಅಂಕಗಳ ಆಚ-’ಗೂ ಬದುಕಿದೆ. ಅಂಕಗಳಿಗಿಂತ ಹೆಚ್ಚಾಗಿ ಅಂತಃಸತ್ವವು ಒಬ್ಬ ವಿದ್ಯಾರ್ಥಿಯನ್ನು ಉತ್ತಮನನ್ನಾಗಿ ರೂಪಿಸುತ್ತದೆ.ಅನುತ್ತೀರ್ಣರಾದ ಕೂಡಲೇ ವಿದ್ಯಾರ್ಥಿಗಳ ಭವಿಷ್ಯ ಮುಗಿದಂತಲ್ಲ ಅಲ್ಲವೇ!!??

ಈಗಿನ ದಿನಗಳಲ್ಲಿ ಎಲ್ಲಕ್ಕಿಂತ ಅತಿ ಹೆಚ್ಚು ಒತ್ತಡವನ್ನು ಮಕ್ಕಳಲ್ಲಿ ಅದರಲ್ಲಿಯೂ ಪರೀಕ್ಷೆಯ ಫಲಿತಾಂಶಗಳ ಸಮಯದಲ್ಲಿ ನೋಡುತ್ತಿರುವುದು ನಿಜಕ್ಕೂ ಶೋಚನೀಯ. ಫಲಿತಾಂಶ ಬರುವ ಮುನ್ನ ಮತ್ತು ನಂತರದ ಆತ್ಮಹತ್ಯೆಗಳ ಸಂಖ್ಯೆಯು ಆತಂಕಕಾರಿ ವಿಷಯವೇ ಸರಿ. ಯಶಸ್ಸಿಗಿಂತ ಪ್ರಯತ್ನವೇ ಮುಖ್ಯ ಎಂಬ ವಾಸ್ತವವನ್ನು ನಾವು ಮಕ್ಕಳಲ್ಲಿ ಬಿತ್ತಿದರೆ ಇಂತಹ ಅನಾಹುತಗಳು ಗಣನೀಯವಾಗಿ ತಪ್ಪುತ್ತವೆಯೋ ಏನೋ.

ಅಂಕಗಳು ಒಂದು ಮಟ್ಟಿಗೆ ಮುಖ್ಯ ಆದ-’ರೆ ಅನುತ್ತೀರ್ಣರಾದವರೂ ನೆಮ್ಮದಿಯಿಂದ ಯಶಸ್ವೀ ಬದುಕು ನಡೆಸಲು ಖಂಡಿತಾ ಸಾಧ್ಯ. ನನ್ನ ಅನಿಸಿಕೆಯಲ್ಲಿ ಅನುತ್ತೀರ್ಣರಾದೇವೆಂದು ಮಕ್ಕಳಿಗೆ ಆತಂಕವಿಲ್ಲ. ಅವರ ಆತಂಕವೇನಿದ್ದರೂ, ಪೋಷಕರು, ಶಿಕ್ಷಕರು ಹೇಗೆ ಪ್ರತಿಕ್ರಿಯಿಸುವರೋ ಎನ್ನುವ ಭಯ! ಹಾಗಾದರೆ ಕಡಿಮೆ ಅಂಕ ಗಳಿಸಿದ್ದಕ್ಕಾಗಿ ಮಕ್ಕಳನ್ನು ದೂಷಿಸುವುದು,ತೆಗಳುವುದು, ಶಿಕ್ಷಿಸುವುದು ಎಷ್ಟರ ಮಟ್ಟಿಗೆ ಸರಿ? ಇದರಲ್ಲಿ ಶಿಕ್ಷಕರಾಗಿ, ಪೋಷಕರಾಗಿ ನಮ್ಮ ಪಾತ್ರ ಏನು!??

ನೊಂದ ಜೀವಕ್ಕೆ ಖಂಡಿತಾ ಸಾಂತ್ವನ, ಭರವಸೆಯ ಅಗತ್ಯವಿದೆ...

ಅಂಕಗಳಲ್ಲಿ ಅಥ-’ವಾ ಪಠ್ಯ ಪುಸ್ತಕಗಳಲ್ಲಿ ಜೀವನವಿಲ್ಲ. ಶಾಲೆಗಳಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯು ಹೆಚ್ಚು ಮಹತ್ವವಾದುದು. ಶಿಕ್ಷಣವೆನ್ನುವುದು ಮಗುವಿನ ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಹೀಗೆ ಸರ್ವತೋಮುಖ ಬೆಳವಣಿಗೆಯ ಗುರಿಯನ್ನು ಮುಟ್ಟುವ ರೀತಿ ಇರಬೇಕು ಹಾಗಾದರೆ ಮಾತ್ರ ಅದು ಮಗುವಿನ ಭವಿಷ್ಯಕ್ಕೆ ಪ್ರೇರಕ, ಪೂರಕ.

ಮನೆಗಳಲ್ಲಿಯೂ ಪೋಷಕರ ನಿರೀಕ್ಷೆಗಳು ಮಕ್ಕಳಿಗೆ ಹೊರೆಯಾಗಬಹುದು. “ನನ್ನ ಬಾಲ್ಯದಲ್ಲಿನ ಈ ಕನಸನ್ನು ನನಸು ಮಾಡಲು ನನಗೆ ಸಾಧ್ಯವಾಗಲಿಲ್ಲ, ನನ್ನ ಮಗುವಾದ್ರೂ ಇದನ್ನು ಮಾಡಲೀ” ಎನ್ನುವ ಮನೋಭಾವವನ್ನು ಬದಲಿಸಿಕೊಳ್ಳಬೇಕು.

ಅನುತ್ತೀರ್ಣರಾದ ಮಕ್ಕಳ ಜೀವನವನ್ನು ಆಹ್ಲಾದಕರ, ಪ್ರೋತ್ಸಾಹಕರ, ಮನಸ್ಥಿತಿಗಳಿಂದ ತುಂಬೋಣ. ನೀನು ಯಾವುದಕ್ಕೂ ಯೋಗ್ಯನಲ್ಲ , ನಿನ್ನ ಸ್ನೇಹಿತನನ್ನು ನೋಡು ಎಂದು ಬೇರೆಯವರೊಂದಿಗೆ ತುಲನೆ ಮಾಡಿ ಅವರನ್ನು ಖಿನ್ನತೆಗೆ ಒಳಪಡಿಸುವುದು ಬೇಡ. ಒಂದು ಪರೀಕ್ಷೆಯಲ್ಲಿ ವಿಫಲವಾದರೆ ಜೀವನವೇ ಇಲ್ಲ ಎನ್ನುವ ಧೋರಣೆ ಮೊದಲು ತ್ಯಜಿಸಬೇಕು

ಸಮಾಜದಲ್ಲಿ ಅನೇಕ ಡ್ರಾಪ್-ಔಟ್‌ಗಳ ಉತ್ತಮ ಯಶಸ್ಸಿನ ಕಥೆಗಳನ್ನು ಮಕ್ಕಳಿಗೆ ಹೇಳೋಣ. ಗಣಿತಜ್ಞ ಶ್ರೀ ಶ್ರೀನಿವಾಸ ರಾಮಾನುಜನ್ ಅವರು ಇಂಟ-ರ್‌ಮೀಡಿಯೇಟ್ ಪರೀಕ್ಷೆಯಲ್ಲಿ ನಾಲ್ಕು ಬಾರಿ ಫೇಲಾಗಿದ್ದರು.ಗಣಿತದ ಹೊರತಾಗಿ ಯಾವ ವಿಷಯದಲ್ಲೂ ಅವರಿಗೆ ತೇರ್ಗಡೆಯ ಕನಿಷ್ಠ ಅಂಕ ಕೂಡ ಬಂದಿರಲಿಲ್ಲ. ಆದರೆ ಮುಂದೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು ಅವರ ಅಸಾಧಾರಣ ಗಣಿತ ಪ್ರತಿಭೆಯನ್ನು ಪರಿಗಣಿಸಿ ಅವರಿಗೆ ಬಿ.ಎ., ಎಫ್. ಆರ್.ಎಸ್.ನಂತಹ ಪದವಿಗಳನ್ನಿತ್ತು ತನ್ನನ್ನು ತಾನೇ ಗೌರವಿಸಿಕೊಂಡಿತು. ಥಾಮಸ್ ಆಲ್ವಾ ಎಡಿಸನ್, ವಾಲ್ಟ್ ಡಿಸ್ನಿ , ಆಲ್ಬರ್ಟ್ ಐನ್‌ಸ್ಟೈನ್ ,ಸಚಿನ್ ತೆಂಡೂಲ್ಕರ್, ಸ್ಟೀವ್ ಜಾಬ್ಸ್ ಅವರಂತಹ ಮಹಾನ್ ವ್ಯಕ್ತಿಗಳು ಸೆಂಟಮ್ ಅಥವಾ ಉತ್ತಮ ಶ್ರೇಣಿಗಳನ್ನು ಗಳಿಸುವ ಬಗ್ಗೆ ಎಂದಿಗೂ ಚಿಂತಿಸಲಿಲ್ಲ. ಆದರೆ ಅವರು ಸಾಧನೆ ಜೀವಮಾನವಿಡೀ ನೆನಪಿನಲ್ಲಿ ಉಳಿಯುತ್ತದೆ.

ಪೋಷಕರು ಮಕ್ಕಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ಆಪ್ತ ಸಮಾಲೋಚನೆ ನಡೆಸಬೇಕು.


ಓದು ಮಾತ್ರ ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಅವರ ಪ್ರತಿಭೆ, ಆಸಕ್ತಿ, ಸಾಮರ್ಥ್ಯ, ಕೌಶಲ್ಯಗಳನ್ನು ಕಂಡುಹಿಡಿಯಲು ಮಗುವಿಗೆ ಸಹಾಯ ಮಾಡಿ ಆತ್ಮವಿಶ್ವಾಸವನ್ನು ತುಂಬಬೇಕು. ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬ-ರಿಗೂ ಅವರವರ ಪ್ರತಿಭೆಗೆ ತಕ್ಕಂತೆ ಉದ್ಯೋಗ ಖಂಡಿತಾ ಲಭ್ಯ. ಕರಕೌಶಲ್ಯ, ಅಭಿನಯ, ಕ್ರೀಡೆ, ಹಾಡುಗಾರಿಕೆ, ಅಡುಗೆ, ಪ್ರಾಣಿ ಪೋಷಣೆ,ಕೇಶ ವಿನ್ಯಾಸ, ಹೀಗೆ ಒಂದೆರಡಲ್ಲ, ಸಾವಿರಾರು ವೃತ್ತಿಗಳು ಪರ್ಯಾಯವಾಗಿವೆ. ಇದರ ಅರಿವು ಮೂಡಿಸೋಣ.

ವೈಫಲ್ಯದಾಚೆಗೂ ಬದುಕು ದೊಡ್ಡದಿದೆ, ಅತ್ಯಂತ ಅಮೂಲ್ಯವಾಗಿ, ಸುಂದರವಾಗಿದೆ ಎನ್ನುವ ಆತ್ಮವಿಶ್ವಾಸ ಮೂಡಿಸಿ, ನಮ್ಮ ಮಕ್ಕಳ ಜೊತೆ ಭರವಸೆಯಾಗಿ ನಿಲ್ಲೋಣ.



## ಕಾವ್ಯರಶ್ಮಿ

**-ಆಶಾ ಅಡೂರ್**
(“ನಮ್ಮ ಕಥಾ ಅರಮನೆ” ಬರಹಗಾರರು)



### ಬಿಂಬ

ಕಂಗಳ ಕೊಳದಲಿ ನಿನ್ನ ಬಿಂಬವರಳಿ
ನವಿರಾದ ಭಾವದ ಸಂಚಲನ
ಒಂದುಗೂಡುವ ಬಯಕೆ ಮೂಡಿ
ನೀಡಿದೆ ಪ್ರೀತಿಯ ಸಾಂತ್ವನ //

ತಣ್ಣನೆ ತಂಗಾಳಿ ಮೆಲ್ಲನೆ ಸುಳಿದಾಡಿ
ನೆನಪಿನ ದೋಣಿಯ ಸಿಂಗಾರ
ಹಿಡಿತಕೆ ಸಿಗದ ಭಾವದ ಮಿಳಿತಕೆ
ನೋಡಿ ನಗುತಿದೆ ಬೆರಳಿನುಂಗುರ //

ಹರೆಯ ಚೆಲುವ ಮಧುರ ಚಣವು
ಸವಿ ಜೇನಂತೆ ಮುದವ ನೀಡಿದೆ
ಪ್ರೀತಿಯ ಗುಂಗು ಹುಚ್ಚು ಹಿಡಿಸಿ
ಒಲವ ಹಂಚುತ ಮೋಡಿ ಮಾಡಿದೆ//



**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR